ತಾವು ತಿಳಿಯಿರಿ. ಅದಿಲ್ಲದಿದ್ದರೆ ನಾವು ಕ್ಷೇತ್ರಕ್ಕೆ ಹೋಗಿ, ಇವತ್ತು ಒಂದು ಪಮಾಣಿಕವಾಗಿ ಜನಸೇವೆ ಮಾಡುವಂತಹ ಒಂದು ನೈತಿಕ ಹಕ್ಕು ನಮಗೆ ಹೋಗಿದೆ. ತಾವು ಇದನ್ನು ಆಲೋಚನೆ ಮಾಡಿ.

ಅಧ್ಯಕ್ಷರು : ಈಗಲೂ ಜನಸೇವೆ ಮಾಡಿ. ಜನಸೇವೆಯಲ್ಲಿ ಇದೆಲ್ಲಾ ಬರುತ್ತದೆ. ಯಾರ ಮೇಲೆ ಕೇಸುಗಳು ಇಲ್ಲ. ಜನಸೇವೆ ಜಾಸ್ತಿ ಮಾಡಿದಾಗಲೇ ಕೇಸುಗಳು ಜಾಸ್ತಿ ಬೀಳುತ್ತವೆ. ಈ ದೇಶದ ಪ್ರಧಾನ ಮಂತ್ರಿಗಳು ಆಗಿದ್ದವರಿಂದ ಮೊದಲ್ಗೊಂಡು, ನನ್ನ ಮತ್ತು ನಿಮ್ಮ ಮೇಲೆನಿಂದ ಹಿಡಿದು ಒಬ್ಬ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿರುವವರಿಗೂ ಕೇಸುಗಳು ಹಾಕುತ್ತಾರೆ. ಕೇಸುಗಳು ಹಾಕುತ್ತಾರೆ, ಹೋಗುತ್ತೇವೆ, ವಿಚಾರಣೆ ಎದುರಿಸುತ್ತೇವೆ, ಸಮಯ ಬಂದಾಗ ಸತ್ಯಾಸತ್ಯತೆ ಹೊರಬೀಳುತ್ತದೆ. ಅದಕ್ಕೆಲ್ಲಾ ಹೆದರಬಾರದು. ಸಾರ್ವಜನಿಕ ಜೀವನದಲ್ಲಿ ಇದ್ದಾಗ ಇದೆಲ್ಲವನ್ನೂ ನಾವು ಎದುರಿಸಬೇಕು. ಈಗೇನು ಕೇಸು ಹಿಂದಕ್ಕೆ ತೆಗೆದುಕೊಂಡಿದ್ದಾರಲ್ಲಾ ಆ ವಿಷಯ ಬಗ್ಗೆ ಇನ್ಯಾಕೆ ತಲೆ ಕೆಡಿಸಿಕೊಳ್ಳುತ್ತೀರಿ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಇವತ್ತು ಅಧಿಕಾರಿಗಳೊಡನೆ ರಾಜಕಾರಣಿಗಳು ಶಾಮೀಲಾಗಿಕೊಂಡು ಇವತ್ತುಸತ್ಯ ಮುಚ್ಚಿಡುತ್ತಿದ್ದಾರೆ

ಅಧ್ಯಕ್ಷರು : ಈಗ ಆ ವಿಷಯವನ್ನು ಮುಕ್ತಾಯ ಮಾಡೋಣ.

2. ಈಸ್ಟೂರು ಗ್ರಾಮದಲ್ಲಿ ನಡೆದಂಥ ಘಟನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಮ್ಮ ಅಪ್ಪಣೆ ಪಡೆದು ಈಸ್ಟೂರು ಗ್ರಾಮದಲ್ಲಿ ನಡೆದಂತಹ ಒಂದು ಘಟನೆಯ ಬಗ್ಗೆ ಇವತ್ತು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಬಹುಶಃ ನಾವು ಯಾವಾಗಲೂ ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ಇಂತಹ ಘಟನೆಗಳು ನಡೆಯುತ್ತವೆ ಎಂದು ಹೇಳಿ ಪತ್ರಿಕೆಗಳಲ್ಲಿ ಓದುತಿರುತ್ತೇವೆ. ಆದರೆ ಇವತ್ತು ಅಂತಹ ಘಟನೆಗಳು ಸರ್ವೇ ಸಾಮಾನ್ಯವಾಗಿ ಬೆಂಗಳೂರು ಅಕ್ಕಪಕ್ಕದಲ್ಲಿ ಮತ್ತು ಬೆಂಗಳೂರು ಪಟ್ಟಣದಲ್ಲೂ ಕೂಡ ಇಂತಹ ಒಂದು ಘಟನೆಗಳು ನಡೆಯುತ್ತಲೇ ಇವೆ.

7 ಪಿ.ಎಂ

ಇಂತಹ ಘಟನೆಗಳು ನಡೆಯಬೇಕೆಂದರೆ ಒಂದು ರಾಜಕೀಯ ಪ್ರೇರಣೆ ಮತ್ತು ರಾಜಕೀಯ ಶಕ್ತಿ ಅವರ ಹಿಂದೆ ಇದೆ. ಇಲ್ಲದೆ ಹೋದರೆ ಬಹುಶಃ ಇಂತಹ ಒಂದು ಅತ್ಯಾಚಾರ ಮಾಡುವುದಕ್ಕೆ ಯಾರೂ ಕೂಡ ಮುಂದೆ ಬರುವುದಿಲ್ಲ. ಇಂತಹ ಅತ್ಯಾಚಾರ ನಡೆಯಬೇಕಾದರೆ, ಬೆಂಬಲ ಅಥವಾ ಸಹಾಯ, ಅಥವಾ ರಾಜಕೀಯ ಪ್ರೇರಣೆ

ಅವರ ಹಿಂದೆ ಇದ್ದಾಗ ಮಾತ್ರ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಹಳ್ಳಿಗಳಲ್ಲಿ ಇಂತಹ ಅತ್ಯಾಚಾರಗಳನ್ನು ಮಾಡುತ್ತಾರೆ. ಇದಕ್ಕೆಸಂಬಂಧಿಸಿದಂತೆ ತಮಗೆ ಗೊತ್ತಿದೆ, ಈಸ್ಟೂರು ಗ್ರಾಮದಲ್ಲಿ ಸುಮಾರು 20 ದಿವಸಗಳ ಹಿಂದೆ ಈ ಒಂದು ಘಟನೆ ನಡೆಯಿತು. ಅದರ ಹಿನ್ನೆಲೆ ಏನೆಂದರೆ ಹಿಂದೆ ಫೆಬ್ರವರಿ 24ರಂದು ವೆಂಕಟೇಶ್ ಎನ್ನತಕ್ಕಂತಹ ಒಟ್ಟು ಹಿಂಡಗಾನಹಳ್ಳಿ ಕ್ರಾಸ್‌ಬಳಿ ಬರುತ್ತಿದ್ದ ಕೆಲವು ಜನ ಅವರ ಮೇಲೆ ಬಾಂಬ್ ಎಸೆದು ಕತ್ತಿ ಮಚ್ಚುಗಳಿಂದ ಥಳಿಸಿ ಗುಂಡು ಹಾರಿಸಿದರು. ಅವರ ಕೊಲೆ ಮಾಡಿದರೂ ಎನ್ನತಕ್ಕಂಥದ್ದು ಎಲ್ಲರಿಗೂ ಕೂಡ ಗೊತ್ತಿರುವಂತಹ ವಿಷಯ. ಆದಾದ ನಂತರ ಅದರ ಪ್ರತಿಕ್ರಿಯೆ ಅವರ ಬೆಂಬಲಿಗರು ಅವರಿಗೆ ಬೇಕಾದ ಜನ ಈ ಒಂದು ಕಗ್ಗೊಲೆಯನ್ನು ನಡೆದ ನಂತರ ಈಸ್ಟೂರು ಗ್ರಾಮದಲ್ಲಿ ಇರತಕ್ಕಂತಹ ಹೆಣ್ಣುಮಕ್ಕಳಾದ ಮಂಜುಳ ಮತ್ತು ರಾಧಮ್ಮ ಇವರ ಮೇಲೆ ಅತ್ಯಾಚಾರ ಮಾಡುವುದಲ್ಲದೆ, ಸೋಮಣ್ಣ ಎನ್ನತಕ್ಕಂತಹ 70 ವರ್ಷದ ವಯಸ್ಸಿನ ಒಬ್ಬ ವಯೋವೃದ್ಧನಿಗೆ ಕೊಲೆ ಮಾಡತಕ್ಕಂಥದ್ದು ಕೂಡ ನಡೆಯಿತು. ಅಂದರೆ ವೆಂಕಟೇಶ್‌ರವರ ಖೂನಿ ಏನು ಇದೆ, ಅದರ ಸೇಡನ್ನು ತೀರಿಸಿಕೊಳ್ಳಬೇಕೆಂದು ಈ ಘಟನೆ ಆಯಿತು. ಆದರೆ ನಾನು ಕೇಳುತ್ತೇನೆ, ಇವತ್ತು ನಿಸ್ಪಕ್ಷಪಾತವಾಗಿ ಇದಕ್ಕೆ ನ್ಯಾಯ ಸಿಗಬೇಕೆಂದು ಹಿಂದೆ ಸಿಓಡಿಗೆ ಇದನ್ನು ವಹಿಸಿಕೊಟ್ಟಿದ್ದರು. ಇದನ್ನೂ ಸಿಎಡಿಗೆ ವಹಿಸಬಾರದು, ಇದನ್ನು ಸಿಬಿಐಗೆ ವಹಿಸಬೇಕು ಎನ್ನತಕ್ಕಂಥದ್ದು ನನ್ನ ವಾದ. ಏಕೆಂದರೆ, ಈ ಘಟನೆಯಲ್ಲಿ ಯಾರ್ಯಾರು ಇನ್‌ವಾಲ್ವ್ ಇದ್ದಾರೆ, ಏಕೆಂದರೆ ರಾಜಕೀಯ ಕೈವಾಡ ಇದೆ ಎನ್ನುವುದು ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬಂದಿದೆ. ವೆಂಕಟೇಶ್ ಕೊಲೆ ಆದ ಮೇಲೆ ಅನೇಕ ಮಂತ್ರಿಗಳು ಕೂಡ ಆ ಒಂದು ಶವ ಸಂಸ್ಕಾರಕ್ಕೆ ಹೋಗಿ ಬಂದಿದ್ದು ಇದೆ. ಅವರು ಹೋಗಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಇದರ ಹಿನ್ನೆಲೆ ಏನು, ಯಾರು ವೆಂಕಟೇಶ್‌ರವರು ಇದ್ದರು, ಮಂಜುಳ ಮತ್ತು ರಾಧಮ್ಮಳ ಅತ್ಯಾಚಾರ ಮಾಡುವುದರಲ್ಲಿ ಯಾರ ಕೈವಾಡ ಇದೆ, ಸೋಮಣ್ಣನ ಕೊಲೆಯಲ್ಲಿ ಯಾರ ಕೈವಾಡ ಇದೆ, ಇವೆಲ್ಲವೂ ಹೊರಗೆ ಬರಬೇಕೆಂದರೆ ಸಿಬಿಐನಿಂದ ತನಿಖೆ ಆಗಬೇಕು. ಆದರೆ ಇವತ್ತು ಈ ಪ್ರಕರಣವನ್ನು ಮುಚ್ಚಿ ಹಾಕಬೇಕೆಂದು, ವಿಚಿತ್ರ ಎಂದರೆ, ಒಬ್ಬರೇ ಅಡ್ವೊಕೇಟ್ ಎರಡೂ ಕಡೆ ಕೂಡ ಅವರೇ ವಕಾಲತ್ತು ವಹಿಸುತ್ತಿದ್ದಾರೆ. ಮತ್ತು ಅದಕ್ಕೆ ಇವತ್ತು ಸರ್ಕಾರದಲ್ಲಿರತಕ್ಕಂತಹ ಮಂತ್ರಿಗಳೂ ಕೂಡ ಬೆಂಬಲ ಕೊಡುತ್ತಿದ್ದಾರೆಂದುಕೂಡ ಹೊರಗೆ ಬಂದಿದೆ. ಅಂದರೆ ವೆಂಕಟೇಷ್ ಕೊಲೆ ಪ್ರಕರಣದಲ್ಲಿ ಹಿಂದೆ ಈ ಸೋಮಣ್ಣನ ಕೊಲೆ ಪ್ರಕರಣ ಏನಿತ್ತು, ಆ ಕೊಲೆ ಪ್ರಕರಣದಲ್ಲಿ ಯಾರು ರಾಮಚಂದ್ರಗೌಡ ಎನ್ನತಕ್ಕಂತಹವರು ಒಬ್ಬರು ಇದರಲ್ಲಿ ಅಕ್ಯೂಸ್ ಆಗಿದ್ದರು, ಆ ಅಕ್ಯೂಸ್ಡ್ ಪರವಾಗಿ ಇರತಕ್ಕಂತಹ ಅಡ್ವೊಕೇಟ್ ಈ ಒಂದು ಕೊಲೆ ಪ್ರಕರಣ ಆದ ಮೇಲೆ ಸ್ಪೆಷಲ್ ಪ್ರಾಸಿಕ್ಯೂಟರ್ ಎಂದು ಅಪಾಯಿಂಟ್ ಮಾಡಬೇಕೆಂದು ವೆಂಕಟೇಶ್, ಕೊಲೆ ಏನಾಗಿತ್ತು ಅದಕ್ಕೆ ಕೂಡ ಅವರೇ ಪ್ರಾಸಿಕ್ಯೂಷನ್

ಪರವಾಗಿ ಅವರೇ ಇದ್ದಾರೆ. ಪ್ರೈವೇಟಾಗಿ ಅಡ್ವೋಕೇಟ್ ಎಂದು ಆ ನಮ್ಮ ವೆಂಕಟೇಶ್ ಅವರ ಕೊಲೆ ಆಗಿದ್ದು, ಅವರ ಕಡೆಯೂ ಅವರೇ. They may be different crimes, but are interconnected. ಹೇಗೆಂದರೆ, ಎರಡೂ ಕೂಡ ಒಂದಕ್ಕೊಂದು ಲಿಂಕ್ ಇದೆ. ವೆಂಕಟೇಶ್ ಕೊಲೆ ಮಂಜುಳಾನ ಗಂಡ ಇವರು ಮಾಡಿದರು ಎಂದು ಹೇಳಿದ ಮೇಲೆ.

ಅಧ್ಯಕ್ಷರು : ಜನರಲ್ಲಿ ಸ್ಪೆಷಲ್ ಪ್ರಾಸಿಕ್ಯೂಟರನ್ನು ಹೇಗೆ ಅಪಾಯಿಂಟ್ ಮಾಡುತ್ತಾರೆ?

The complainats come before the Government and make an application. ನನಗೆ ಈ ವಿಚಾರಣೆ ಮಾಡುವುದಕ್ಕೆ ಒಬ್ಬ ಸ್ಪೆಷಲ್ ಪ್ರಾಸಿಕ್ಯೂಟರ್ ಅಪಾಯಿಂಟ್ ಮಾಡಿ ಎಂದು. ಅದು ಅವರ ಛಾಯಿಸ್. They generally

Sri Y. Ramakrishna : that procedure has not been followed here.

Mr. Speaker : Appointment of a special prosecutor, if it is done at the instance of the accused, then it is a mistake.

If it has been done on the behest of the complainant, then how can you take objection?

Sri Y. Ramakrishna : It is the question of political influence of a person who is the member of the cabinet.

Mr. Speaker : If a crime is register under 302 on the complaint of X and the complainant makes a suggestion to the G overnment, or request the Government that so and so be appointed as special prosecutor to look into that particular case. How can any body take objection?

Sri M. Veerappa Moily : It is some sort of a case

Mr. Speaker : Is it a case and a counter case? They are two different cases. They are two different crimes.

Sri Y. Ramakrishna : It is a retaliation case.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ಎರಡು ಮರ್ಡರ್ ಕೇಸ್‌ಗಳು ಇವೆ.

Mr. Speaker : I will tell you ನಮ್ಮಲ್ಲಿ ಪಂಚಾಯತಿ ಎಲೆಕ್ಷನ್ ಆದಾಗ ಇಂಥದ್ದೇ ಒಂದು ಆಯಿತು. ಆಗ ಮೋಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದರು. ತಿಮ್ಮರಾಯಪ್ಪ ಎನ್ನುವವರನ್ನು The was the special prosecutor. He was defending the accused in one case same man was the special prosecutor in another case. We have questioned this at that time, and I was educated by the High Court and several other advocates at that time. They said it is the choice of the Complainant.

Sri M. Veerappa Moily : It is the choice of the Complainant.

Mr. Speaker : That's what exactly I said.

Sri M. Veerappa Moily : But it is not so in this case.

Mr. Speaker : Anyway the Government should say.

Sri. M. Veerappa Moily : It is not. In the first set of murder case, the same advocate is an Advocate for a case. He is the Advocate for the accused in first set of case. In the second case, on retaliation another murder has taken place. In that, Complainant has not requested. In fact, that advocate appears for the accused in the first set of case. In the second set of case, who is the complainant? It is A vs. B. At the instance of the accused.

Mr. Speaker : To be more clear, ಫರ್ಸ್ಟ್ ವೆಂಕಟೇಶ್ ಮರ್ಡರ್ ಆಯಿತು. ವೆಂಕಟೇಶ್ ಮರ್ಡರ್ ಕೇಸ್‌ನಲ್ಲಿ This special Prosecutor is appearing for whom?

Sri Veerappa Moily : For the Accused. And the same special Prosecutor is appearing for the complainant also. It is so simple as this.

Mr. Speaker : Mr. Y. Ramakrishna, you have to make clear by going through the records. It is only in the academic interest. Since the Bill is yet to come from the Upper house, we are trying to engage in this.

Sri M. Veerappa Moily : That means to say, ಕೇಸ್‌ನಲ್ಲಿ ಅಕ್ಯೂಸ್ಡ್ ಅವರು ರೆಪ್ರಸೆಂಟೇಟಿವ್ ಸ್ಪೆಷಲ್ ಪ್ರಾಸಿಕ್ಯೂಟರ್

ಶ್ರೀ ಸಿ. ಎಂ. ಲಿಂಗಪ್ಪ : ಎರಡನೆಯ ಪ್ರಕರಣ ಆದ ಮೇಲೆ ಎರಡನೆಯ ಪ್ರಕರಣದ ಆರೋಪ ರಾಮಚಂದ್ರಗೌಡ ಪರವಾಗಿ ಒಬ್ಬರು ವಕೀಲರು ವಕಾಲತ್ತು ವಹಿಸುತ್ತಾರೆ. ಅದೇ ವಕೀಲರು ಮೊದಲನೇ ಪ್ರಕರಣಕ್ಕೆ ಸ್ಪೆಷಲ್ ಪ್ರಾಸಿಕ್ಯೂಟರ್ ಆಗಿ ವರ್ಕ್ ಮಾಡಿದ್ದಾರೆ. ಎರಡನೇ ಕೊಲೆ ಪ್ರಕರಣ ಮೊದಲ ಆರೋಪಿ ರಾಮಚಂದ್ರಗೌಡರ ಪರ ವಕೀಲರು ಮೊದಲ ಕೊಲೆ ಪ್ರಕರಣದ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದಾರೆ. ನಮಗೆ ತಿಳಿದ ವರದಿ ಪ್ರಕಾರ ಸರ್ಕಾರದಲ್ಲಿ ಇರತಕ್ಕಂತಹ ಮಂತ್ರಿಗಳ ಒತ್ತಡದಿಂದ ಅವರನ್ನು ನೇಮಿಸಲಾಗಿದೆ.

ಅಧ್ಯಕ್ಷರು : ಲಿಂಗಪ್ಪನವರೇ, ಯಾರು ದೂರು ಕೊಟ್ಟಿದ್ದಾರೆ, ಇಂಥವರು ನಮ್ಮವರನ್ನು ಕೊಲೆ ಮಾಡಿದ್ದಾರೆಂದು ಹೇಳಿ, ದೂರು ಕೊಟ್ಟಿರುವಂಥ ಜನ ಅಪೇಕ್ಷೆ ಮಾಡಿದರೆ, ಈ ವಿಶೇಷ ಪ್ರಾಸಿಕ್ಯೂಟರ್ ನೇಮಕ ಮಾಡಿದರೆ ಅದು ಅಕ್ಷೇಪಣೆ ಅಲ್ಲ, ಒಂದು ವೇಳೆ ಸರ್ಕಾರ ಸ್ವಯಂಪ್ರೇರಿತವಾಗಿ ಅವರನ್ನು ನೇಮಕ ಮಾಡಿದರೆ ಅವಾಗ

What you say holds water. Let us know what the Govt says anyway

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೊನೆಗೆ ಏನು ಹೇಳುತ್ತಾರೆ ಅದನ್ನು

ಅಧ್ಯಕ್ಷರು : ನಿಮ್ಮ ಗುಲ್ಬರ್ಗಾ ಕಥೆ ಒಂದು ತರಹ ನೀವು ಬೆಂಗಳೂರಿಗೆ ಬಂದು if you travel towards Hoskote, Kolar ಬಹಳ ಕಾಂಪ್ಲಿಕೇಟೆಡ್ ಇವೆಲ್ಲಾ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಕಾಂಪ್ಲಿಕೇಟೆಡ್ ಕೇಸ್‌ಸ್ ಅಥವಾ ಕಾಂಪ್ಲಿಕೇಟೆಡ್ ಸಿಚ್ಯುಯೇಷನ್ ಇದ್ದಾಗ

Mr. Speaker : Mr.Krishna Reddy is very watchful in listening to the whole thing..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವೊತ್ತಿನ ಪತ್ರಿಕೆಯಲ್ಲಿ ಬಂದದ್ದು ತಮ್ಮ ಗಮನಕ್ಕೆ ತರುತ್ತೇನೆ. ದಿನಾಂಕ 27.3.1997 ಕೊಲೆ ಪ್ರಕರಣ ಬಚ್ಚೇಗೌಡರ ನೇರ ಹಸ್ತಕ್ಷೇಪ, ಕ್ರಿಮಿನಲ್ ಮೊಕದ್ದಮೆ ತನಿಖೆಯಲ್ಲಿ ನೇರವಾಗಿ ಹಸ್ತಕ್ಷೇಪ ಮಾಡಿರುವ ಆರೋಪಕ್ಕೆ ನಗರಾಭಿವೃದ್ಧಿ ಮಂತ್ರಿ ಶ್ರೀ ಬಿ. ಎನ್. ಬಚ್ಚೇಗೌಡರು ಗುರಿಯಾಗಿದ್ದಾರೆ. ಕಾನೂನು ಇಲಾಖೆ ಮೂಲಗಳಿಂದ ಕನ್ನಡ ಪ್ರಭಕ್ಕೆ ಲಭ್ಯವಾದ ಮಾಹಿತಿ ಪ್ರಕಾರ, ತಮ್ಮ ಹತ್ತಿರದ ಸಂಬಧಿಗಳೇ ಆರೋಪಿಗಳಾಗಿರುವ ಈ ಪ್ರಕರಣದಲ್ಲಿ ಹಸ್ತಕ್ಷೇಪ. ಮಾಡಿರುವ ಸಚಿವರು, ವಿಚಿತ್ರ ರೀತಿಯಲ್ಲಿ ತಮಗೆ ಬೇಕಾದವರನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಿಸಲು ಸರ್ಕಾರವನ್ನು ಒಪ್ಪಿಸಿದ್ದಾರೆ. ನಿಯಮಗಳನ್ನು ಗಾಳಿಗೆ ತೂರಿ, ಬಚ್ಚೇಗೌಡರ ಮನವಿಯನ್ನು ಪುರಸ್ಕರಿಸಿದ ರಾಜ್ಯ ಸರ್ಕಾರ, ಸಚಿವರಿಗೆ ಬೇಕಾದ ವ್ಯಕ್ತಿಯನ್ನೇ ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಿಸಿದ ಆದೇಶ ಹೊರಡಿಸಿದೆ. ಸಚಿವರು ಈಗ ಮಧ್ಯ ಪ್ರವೇಶಿಸಿರುವ ಕಾರಣ, ಕೊಲೆ ಮತ್ತು ಅತ್ಯಾಚಾರ ಮೊಕದ್ದಮೆಯಲ್ಲಿ ಮುಖ್ಯ ಆರೋಪಿಯಾಗಿರುವ ಅವರ ಸಂಬಂಧಿಯೊಬ್ಬರ ಪರ ವಕಾಲತ್ತು ವಹಿಸುತ್ತಿರುವ ವಕೀಲರೇ ಅದಕ್ಕೆ ಪ್ರತೀಕಾರವಾಗಿ ನಡೆದ ಇನ್ನೊಂದು ಮೊಕದ್ದಮೆಯಲ್ಲೂ ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕವಾಗಿದ್ದಾರೆ.

ಕಾನೂನು ಇಲಾಖೆ ಅಧಿಕಾರಿಗಳು ಸಚಿವರ ಹಸ್ತಕ್ಷೇಪ ಹಾಗೂ ಈ ಪ್ರಕರಣದಲ್ಲಿ ಅವರಿಗಿರುವ ಆಸಕ್ತಿಯನ್ನು ವಿವರಿಸುವುದು ಹೀಗೆ ಎನ್ನತಕ್ಕಂಥ ಪ್ರಶ್ನೆ ಇವೊತ್ತು ಬಂದಿದೆ. ಅದಕ್ಕೆ ಇವೊತ್ತು ಅವರು ಮುಂದೆ ಹೇಳುತ್ತಾ ಇವೊತ್ತಿನ ದಿವಸ ಏನು ಹೇಳಿದಾದರೆಂದರೆ ಫೆಬ್ರವರಿ ಕೊನೆವಾರ ಅಲ್ಲಿ ಜಿಲ್ಲೆಯಲ್ಲಿ ನಡೆದಂಥ ಘಟನೆ ಬಗ್ಗೆ ವಿವರಣೆ ಇದೆ. ಯಾವ ರೀತಿಯಾಗಿ ವೆಂಕಟೇಶ್ ಕೊಲೆಯಾಯಿತು. ಯಾವ ಕಾರಣಕ್ಕಾಗಿ ಆಯಿತು. ಅದರ ಹಿನ್ನಲೆ ಏನು? ರಾಜಕಾರಣ ಏನು ಎನತಕ್ಕಂಥದ್ದು ಇದೆ ಅದರ ಬಗ್ಗೆ ನಾನು ಹೋಗುವುದಿಲ್ಲ. ಅದು ಆದ ಮೇಲೆ ಈ ಒಂದು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಅಂದರೆ ಕಾನೂನನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಯಾವ ರೀತಿ ಅಮಾಷವಾಗಿ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾವು ಗಮನಿಸಬೇಕು. ಇದು ಒಂದು. ಒಂದು ಕಡೆ ಪ್ರಾಸಿಕ್ಯೂಟರ್ ಅಪಾಯಿಂಟ್ ಮಾಡತಕ್ಕಂಥದ್ದು ಎರಡನೇಯದು ಏನು ಎಂದರೆ ಮುಖ್ಯವಾಗಿ ಅಮಾಯಕರಾದ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ತಮ್ಮ ರಾಜಕೀಯ ಸೇಡನ್ನು ತೀರಿಸಿಕೊಳ್ಳುವುದರ ಮೂಲಕ ಒಂದು ಕೊಲೆಯ ಪ್ರತಿಕಾರ ತೀರಿಸುವುದು ಈ ಮೂಲಕ ನೋಡಿದರೆ ಪ್ರತಿಯೊಬ್ಬರೂ ಅಧಿಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಯಾರ ಮನೆಗೆ ಯಾರು ಬೇಕಾದರೂ ನುಗ್ಗಬಹುದು, ಯಾರು ಕೊರೆ ಮಾಡಿದ್ದಾರೆ. ಅವರಿಗೆ ನೀವು ಕಾನೂನು ಪ್ರಕಾರ ಶಿಕ್ಷೆ ಕೊಡಿಸಿ, ಇಲ್ಲ ಗೂಂಡಾ ಆ್ಯಕ್ಟ್‌ನಲ್ಲಿ ಹಿಡಿದು ಒಳಗೆ ಹಾಕಿಸಿ. ಪೋಲೀಸರು ತಮ್ಮ ಕೈಯಲ್ಲಿದ್ದಾಗ ಯಾರನ್ನಾದರೂ ಯಾವ ರೀತಿಯಾಗಿ ಮಣಿಸಬೇಕು, ಯಾವ ರೀತಿಯಾಗಿ ಶಿಕ್ಷೆ ಕೊಡಬೇಕು ಎನ್ನುವುದರ ಬಗ್ಗೆ ತಮಗೆ ಸಂಪೂರ್ಣವಾದ ಅಸ್ತ್ರಗಳು ಗೊತ್ತಿದೆ. ಅದು ಗೊತ್ತಿದ್ದರೂ ಕೂಡ ಇವೊತ್ತಿನ ದಿವಸ ಯಾವುದೋ ಬೆಂಬಲ ಇದೆ ಎಂದು ರಾಜಕೀಯ ಶಕ್ತಿಗಳು ಅದರ ಹಿಂದೆ ಇದೆ ಎಂದು ತಿಳಿದುಕೊಂಡು ಇವೊತ್ತಿನ ದಿವಸ ಅವರಿಗೆ ಬೇಕಾದಂಥ ಜನ ಈ ರೀತಿಯಾಗಿ ಅತ್ಯಾಚಾರ ಹಳ್ಳಿಗಳಲ್ಲಿ ನಡೆದರೆ ಹೇಗೆ? ಅದು ಎಲ್ಲೋ ಒಂದು ರಿಪೋರ್ಟ್ ವಿಲೇಜ್‌ನಲ್ಲಿ ನಡೆದಿದೆ, ಅಲ್ಲಿ ಕಾನೂನು ಗೊತ್ತಿಲ್ಲ ಅಥವಾ ರಾಜಧಾನಿಗೆ, ಜಿಲ್ಲೆಗೆ ಅಥವಾ ಪೋಲೀಸ್ ಸ್ಟೇಷನ್‌ಗೆ ದೂರ ಇದೆ ಅಂತಹ ಕಡೆ ಆ ಘಟನೆ ನಡೆದಿದೆ, ಯಾರಿಗೂ ಗೊತ್ತಿಲ್ಲ ಎಂದರೆ ಆ ಮಾತು ಬೇರೆ. ಆದರೆ ಇದು ಹತ್ತಿರ ಇರತಕ್ಕಂಥದ್ದು 20-30ಕಿ.ಮೀ.ನಲ್ಲಿ ಇರತಕ್ಕಂಥ ಊರುಗಳಲ್ಲಿ ಇಂತಹ ಘಟನೆಗಳು ನಡೆಯಬೇಕು ಮತ್ತು ಈ ಘಟನೆಗಳಿಗೆ ಸರ್ಕಾರದವರು ಪ್ರೋತ್ಸಾಹ ನೀಡಬೇಕು ಎಂದರೆ ಏನು? ಸರ್ಕಾರ ಇದೆಯೋ? ಪೋಲೀಸ್ ಇದೆಯೋ? ಇದು ಯಾವುದೋ ಒಂದು ವೈಯಕ್ತಿಕ ಜಗಳ ಇರಬಹುದು, ಅಥವಾ ರಾಜಕಾರಣ ಇರಬಹುದು ಅದರೆ ಇಂಥದ್ದಕ್ಕೆ ಇವೊತ್ತಿನದಿವಸ ನೀವೆಲ್ಲರೂ ಪ್ರೋತ್ಸಾಹ ಕೊಡತಕ್ಕಂಥದ್ದು ಇದ್ದರೆ,

ಎಲ್ಲಿ ನ್ಯಾಯ ಸಿಗುತ್ತದೆ? ಜನ ಎಲ್ಲಿ ಹೋಗಬೇಕು? ಯಾವ ಸರ್ಕಾರದ ಮುಂದೆ ಹೋಗಬೇಕು? ಯಾವ ಪೋಲೀಸ್ ಆಫೀಸರ್ ಮುಂದೆ ಹೋಗಬೇಕು. ಮತ್ತು ನಾಳೆ ಪ್ರಾಸಿಕ್ಯೂಟರ್ ಕೂಡ ಈ ರೀತಿಯಾಗಿ ಅಕ್ಯೂಸ್ಡ್ ಇರತಕ್ಕಂಥರ ಕಡೆ ಒಂದು ಪರ ಇನ್ನೊಂದು ಕಡೆ ಕಂಪ್ಲೇಸೆಂಟ್ ವಿರುದ್ಧ ಅವರು ಇರತಕ್ಕಂಥದ್ದು, ಅಕ್ಯೂಸ್ಡ್ ಪರವಾಗಿ ಪ್ರಾಸಿಕ್ಯೂಟರ್ ಎಂದರೆ ಇದು ನ್ಯಾಯ ಸಿಗತಕ್ಕಂಥದ್ದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇದರಲ್ಲಿ ಅನೇಕ ಮುಖಂಡರು ಇನ್ವಾಲ್ವ್ಡ್ ಆಗಿದ್ದಾರೆ ಎನ್ನತಕ್ಕಂಥದ್ದು ಇದೆ. ಅವರು ಯಾವ ಪಕ್ಷದವರೇ ಇರಲಿ ನಮ್ಮ ಪಕ್ಷದವರೇ ಇರಲಿ, ನಿಷ್ಪಕ್ಷಪಾತವಾಗಿ ನ್ಯಾಯ ಸಿಗಬೇಕು ಎಂದರೆ ಇನ್‌ವೆಸ್ಟಿಗೇಟ್ ಮಾಡಲು ಸಿಬಿಐಗೆ ರೆಫರ್ ಮಾಡಿ. ಮತ್ತು ಯಾರು ಯಾರು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳದೆ ಹೋದರೆ ಖಂಡಿತವಾಗಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಈಗಾಗಲೇ ಇದೊಂದು ಫೂಲನ್‌ದೇವಿ ಕೇಸ್ ಆಗಿದೆ. ಯಾವ ರೀತಿಯಾಗಿ ಫೂಲನ್ ದೇವಿಗೆ ಕೆಲವು ಠಾಕೂರ್ ಜನ ಅನ್ಯಾಯ, ಅತ್ಯಾಚಾರ ಮಾಡಿದಾಗ ಕೊನೆಗೆ ಅವಳು ಎದ್ದಳು ಅನೇಕ ಜನರ ಕೊಲೆ ಮಾಡಿದಳು ಅದೇ ರೀತಿಯಾಗಿ ಇಲ್ಲೂ ಕೂಡ ಫೂಲನ್ ದೇವಿಗಳು ಏಳುತ್ತಾರೆ. ಆ ರೀತಿಯಾದ ನಮ್ಮ ವರ್ತನೆ ಇದ್ದಾಗ ಅವರೇ ಕೈಯಲ್ಲಿ ಬಂದೂಕು ತೆಗೆದುಕೊಂಡು..

ಅಧ್ಯಕ್ಷರು : ಬರೀ ಫೂಲನ್ ದೇವಿ ಆದರೆ ಪರವಾ ಇಲ್ಲ, ಆದರೆ ಎಲ್ಲರೂ ಪಾರ್ಲಿಮೆಂಟ್‌ಗೆ ಬಂದರೆ ಏನು ಮಾಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಪಾರ್ಲಿಮೆಂಟ್‌ಗೆ ಏಕೆ ಬರಬೇಕಾಯಿತು ಎಂದು ಆಕೆಯ ಮೊದಲಿನ ಹಿನ್ನಲೆ ನೋಡಿ. ಏಕೆ ಅವಳು ಹಾಗೆ ಆದಳು ಎನ್ನತಕ್ಕಂಥದ್ದು ಒಂದು. ಹೇಗೆ ಇವೊತ್ತು 19 ವರ್ಷದ ಹುಡುಗಿಯರ ಮೇಲೆ, 20 ವರ್ಷದ ಹುಡುಗಿಯರ ಮನೆಗೆ ಹತ್ತು ಹನ್ನೆರಡು ಜನ ಗೂಂಡಾಗಳು ರಾತ್ರಿ ಅವರ ಮನೆಗೆ ಹೋಗಿ ಅವರ ಮೇಲೆ ಅತ್ಯಾಚಾರ ಮಾಡಿ ಅವರು ಸತ್ತರು ಎಂದು ಆಸ್ಪತ್ರೆಯಲ್ಲಿ ಹಾಕಿ ಬಿಸಾಕಿ ಹೋಗಿದ್ದಾರೆ ಎಂದರೆ ಎಷ್ಟರ ಮಟ್ಟಿಗೆ ಅಲ್ಲಿಯ ಸರ್ಕಾರ ಪೋಲೀಸ್ ಜೀವಂತ ಇದೆ? ನೆಕ್ಸ್ಟ್ ಡೇ ಬೇರೆಯವರು ಬಂದಿದ್ದರಿಂದ ಆಕೆ ಬದುಕಿದ್ದಾಳೆ. ಇಲ್ಲದೇ ಹೋದರೆ ಅವರಿಗೆ ನೋಡಿಕೊಳ್ಳತಕ್ಕಂಥ ಜನರೂ ಕೂಡ ಇಲ್ಲ. ಇವು ಬೆಂಗಳೂರಿಗೆ ಸಮೀಪ ಇರತಕ್ಕಂಥ ಊರುಗಳು, ರಾಜಧಾನಿಗೆ ಸಮೀಪ ಇರತಕ್ಕ ತಾಲ್ಲೂಕುಗಳು. ಅಂತಹ ಕಡೆ ಇದು ನಡೆದರೆ ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ಗೌರವ ಬರುತ್ತದೆ. ಎನ್ನತಕ್ಕಂಥದ್ದನ್ನು ಹೇಳಬೇಕು. ಅದಕ್ಕೆ ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಈ ವಿಷಯ ಸಿ.ಓ.ಡಿ.ಗೆ ಹೋಗುವುದು ಬೇಡ, ಸಿ.ಓ.ಡಿ. ಎನ್‌ಕ್ವೈರಿ ಸರಿಯಾದ ರೀತಿಯಿಂದ ಆಗುವುದಕ್ಕೆ

ತೊಂದರೆಯಾಗುತ್ತದೆ, ನೇರವಾಗಿ ಎಲ್ಲಾ ಕಡೆ ಪತ್ರಿಕೆಗಳಲ್ಲಿ ಕೂಡ ಬಂದಿದೆ ನೇರವಾಗಿ ಜನ ಹೇಳುತ್ತಾರೆ. ಇದರಲ್ಲಿ ಮಂತ್ರಿಗಳ ಹಸ್ತಕ್ಷೇಪ ಇರುವುದರಿಂದ, ಅವರ ಕೈವಾಡ ಇರುವುದರಿಂದ ಅವರ ಬೆಂಬಲ ಇರುವುದರಿಂದ, ಅವರ ರಿಲೇಟಿವ್ ಇನ್ವಾಲ್ವ್ಡ್ ಇರುವುದರಿಂದ ಅವರ ಪ್ರತೀಕಾರಗೋಸ್ಕರ ಈ ಘಟನೆ ನಡೆದಿದೆ, ಇದರಿಂದ ಸಿ.ಓ.ಡಿ. ತನಿಖೆ ಸರಿಯಾಗಿ ಆಗುವುದಿಲ್ಲ. ಎನ್ನತಕ್ಕಂಥ ಏನು ಭಾವನೆ ಇದೆ ಜನರಲ್ಲಿ ಆ ಭಾವನೆ ತೆಗೆದು ಹಾಕಬೇಕಾದರೆ ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಬೇಕು. ಆವಾಗ ಮಾತ್ರ ಬಹಳ ಒಳ್ಳೇಯ ನಿರ್ಣಯ ಬರುತ್ತದೆ ಅಥವಾ ಜನರಿಗೆ ನ್ಯಾಯ ಸಿಗತಕ್ಕಂಥದ್ದು ಸಾಧ್ಯ ಇದೆ. ಇಲ್ಲದಿಹೊದರೆ ನ್ಯಾಯ ಸಿಗುವುದಿಲ್ಲ. ಎಂದು ಹೇಳುತ್ತೇನೆ. ದಯವಿಟ್ಟು ಇದನ್ನು ಸಿ.ಬಿ.ಐ. ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಅನೇಕಲ್) : ಈ ಕೇಸಿನ ಫ್ಯಾಕ್ಟಗೆ ಹೋಗುವುದಕ್ಕೆ ಮುಂಚೆ ಇದು ಒಂದು ದುರ್ದೈವದ ಸಂಗತಿ ಎಂದು ಹೇಳುತ್ತೇನೆ. ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ಇಂಥದ್ದು ಬಹಳ ಆಗುತ್ತಿವೆ. ನಾನು ಹೇಳಿದೆ ತಮಗೆ ನಮ್ಮ ಅನೇಕಲ್ಲ್ನಲ್ಲಿ ಏನೇನು ಆಗುತ್ತಿದೆ ಎಂದು. ಕಳೆದ ಅಧಿವೇಶನದಿಂದ ಈ ಅಧಿವೇಶನದವರೆಗೆ ಸುಮಾರು 23 ಕೊಲೆಗಳು ಆಗಿವೆ. ಅಲ್ಲಿ 19 ಕೊಲೆಗಳು ಆಗಿವೆ. ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ ಭಗವಂತನು ಒಬ್ಬನೇ ಕೇಳಬೇಕು. ಏತಕ್ಕೆ ಹೇಳುತ್ತಿದ್ದೇನೆ ಎಂದುರೆ ನಾವು ಇದರ ಬಗ್ಗೆ ಎಷ್ಟೋ ಸಾರಿ ಸರ್ಕಾರಕ್ಕೆ ಒತ್ತಿ ಹೇಳಿದರೂ ಕೂಡ..

ಅಧ್ಯಕ್ಷರು : ಅವರು ಏನು ಜನನೋ ಅಥವಾ ಇನ್ನು ಏನೋ ಎಂದು ಅನುಮಾನ ಬರುತ್ತಿದೆ.

ಶ್ರೀ ವೈ. ರಾಮಕೃಷ್ಣ : ಅದು ಒಂದೇ ಪೋಲೀಸ್ ಜ್ಯೂರಿಸ್‌ಡಿಕ್ಷನ್‌ಗೆ ಬರುತ್ತದೆ. ಅದಕಾರಣ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಏನಾಗಿದೆ ಎಂದರೆ ಮೊದಲನೇ ಇನ್ಸಿಡೆಂಟ್‌ನಲ್ಲಿ ವೆಂಕಟೇಶ್ ಸತ್ತಿದ್ದು. ಮತ್ತು ಸಣ್ಣಪ್ಪನ ಕೊಲೆ ಮತ್ತು ಇಬ್ಬರು ಹೆಣ್ಣುಮಕ್ಕಳ ಅತ್ಯಾಚಾರ ಇವೆಲ್ಲವಕ್ಕೂ ಸಂಬಂಧ ಇದೆ. It is a retaliation case... ಮೊದಲನೇಯದು ಅಲ್ಲಿ ವೆಂಕಟೇಶ್ ಸತ್ತಿದ್ದು, ಅವರು ಸೇಡು ತೀರಿಸಿಕೊಳ್ಳುವುದಕ್ಕೆ 70 ವರ್ಷದ ಸಣ್ಣಪ್ಪನಿಗೆ ಸಂಬಂಧ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ I don't want to go into the merits of the case ..... ಸಬ್‌ಜ್ಯುಡೀಸ್ ಆಗಬಹುದು ಎನ್ನತಕ್ಕಂಥ ವಿಷಯಗಳಿಗೆ ನಾನು ಹೋಗುವುದಿಲ್ಲ. ಲಾ ಮಾತ್ರ ಹೇಳುತ್ತೇನೆ;

ಅಧ್ಯಕ್ಷರು: ಪೇಪರ್‌ನಲ್ಲಿ ಬಂದ ಪ್ರಕಾರ ಇವರು ಹುಡುಕಿಕೊಂಡು ಹೋಗಿದ್ದು ಕರಿಯಣ್ಣನನ್ನು ಆದರೆ ಕರಿಯಣ್ಣ ಸಿಗಲಿಲ್ಲ.

**ಶ್ರೀ ವೈ. ರಾಮಕೃಷ್ಣ** : ಬಹುಶಃ ಕರಿಯಣ್ಣ ಸಿಕ್ಕಿದ್ದರೆ ಏನಾಗುತ್ತಿತ್ತು ಎಂಬುದನ್ನು ಆಲೋಚನೆ ಮಾಡೋಣ. ಅದು ಬಹಳ ಮುಖ್ಯ ತಾನೆ. ಬಡವರಿಗೆ ನ್ಯಾಯ ಎಲ್ಲಿದೆ. 19-20 ವರ್ಷದ ಹೆಣ್ಣುಮಗಳನ್ನು ರೇಪ್ ಮಾಡಿ ಜ್ಞಾನ ತಪ್ಪಿಸಿ ಅವಳನ್ನು ತೆಗೆದುಕೊಂಡು ಹೋಗಿ ಆಸ್ಪತ್ರೆ ಕಾಂಪೌಂಡಿನಲ್ಲಿ ಬಿಸಾಕಿದ್ದಾರೆ ಎಂದರೆ ಇದಕ್ಕಿಂತ ಅನ್ಯಾಯ ಜಗತ್ತಿನಲ್ಲಿ ಬೇರಿಲ್ಲ. ಯಾರು ಇದನ್ನು ವಿಚಾರಿಸುವವರು? ಈ ಬಗ್ಗೆ ಇವರಿಗೆ ಎಷ್ಟು ಬಾರಿ ಹೇಳಿದರೂ ಕೂಡ ಇವರ ಕಿವಿಗೆ ಬೀಳುತ್ತಲೇ ಇಲ್ಲ. ಆದ್ದರಿಂದ ಲಾ ಡಿಪಾರ್ಟ್‌ಮೆಂಟಿನವರಿಗೆ ನನ್ನದೊಂದು ಪ್ರಾರ್ಥನೆ ಇದೆ. ಏಕೆಂದರೆ ನಾನೂ ಕೂಡ ಹಿಂದೆ ಕಾನೂನು ಮಂತ್ರಿಯಾಗಿ ಕೆಲಸ ಮಾಡಿರುವುದರಿಂದ ಒಂದು ಪ್ರಶ್ನೆಯನ್ನು ನಾನು ತಮ್ಮಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯಶ್ರೀ ಬಚ್ಚೇಗೌಡರು 24ನೇ ತಾರೀಖು ಸರ್ಕಾರಕ್ಕೆ ಬರೆದ ಪತ್ರದಲ್ಲಿ ಇಂಥವರನ್ನೇ ನೇಮಕ ಮಾಡಬೇಕೆಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದ ನಂಬರ್ ಕೂಡ ಇಲ್ಲಿ ಇದೆ. ಈ ಒಂದೇ ದಿವಸದಲ್ಲಿ ಅಂದರೆ 25-03-97ರಂದೇ ಲಾ ಡಿಪಾರ್ಟ್‌ಮೆಂಟ್ ಲೆಟರ್‌ನಲ್ಲಿ ತಿಳಿಸಿರುವಂತೆ ಲೆಟರ್ ನಂಬರ್ 351 ಸಿಎಲ್‌ಸಿಎಮ್ ದಿನಾಂಕ 25-03-97ರಂದೇ ನೀವು ಅಪಾಯಿಂಟ್‌ಮೆಂಟ್ ಮಾಡಿದ್ದೀರಿ. ಈ ರೀತಿ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ರೂಲ್ಸ್, ರೆಗ್ಯುಲೇಷನ್ಸ್ ಏನೂ ಇಲ್ಲವೇ?ಯಾರ ಓಪೀನಿಯನ್ ನೀವು ತೆಗೆದುಕೊಂಡಿದ್ದೀರಿ? Have you taken the opinion of the District Magistrate? Have you taken the opinion of the Director of prosecution or atleast the recommendation of the panel of advocates?

ಎಲ್ಲಾ ಕಾನೂನು ಮತ್ತು ರೂಲ್ಸ್‌ಗಳನ್ನು ಬದಿಗೊತ್ತಿ ಒಂದೇ ದಿವಸದಲ್ಲಿ ಮಂತ್ರಿಗಳು ಒಂದು ನೋಟ್ ಕೊಟ್ಟರು ಎಂದು ತಾವು ಅಪಾಯಿಂಟ್ ಮಾಡುವುದು ನ್ಯಾಯವೇ? This is a crucial point. ನಡೆದಿರುವುದು ತಮಗೆ ಗೊತ್ತಿದೆ, ತಮ್ಮ ಡಿಪಾರ್ಟ್‌ಮೆಂಟ್‌ನವರಿಗೆ ಗೊತ್ತಿದೆ. ಪತ್ರಿಕೆಗಳ ಮುಖಾಂತರ ಈ ಬಗ್ಗೆ ಪ್ರಚಾರ ಕೂಡ ಆಗಿದೆ. ಹೀಗಿರುವಾಗ ಸ್ವತಃ ಮಂತ್ರಿಗಳೇ ತಮ್ಮ ಲೆಟರ್‌ನಲ್ಲಿ ಇಂಥವರನ್ನೇ ನೀವು ನೇಮಕ ಮಾಡಬೇಕು ಎಂದು ಕಾಗದದಲ್ಲಿ ಏನು ಬರೆದಿದ್ದಾರೆ ಅದನ್ನು ವಿಚಾರಣೆ ಮಾಡದೇ ತಾವು ಮರುದಿವಸವೇ ಡೈರೆಕ್ಟ್ ಅಪಾಯಿಂಟ್ ಮಾಡಿದಿರಿ. ನಾನು ಈಗ ತಮ್ಮನ್ನು ಕೇಳುವುದೇನೆಂದರೆ ಈಗಾಗಲೇ ತಾವು ಸಿ.ಓ.ಡಿಗೆ ಇದನ್ನು ಒಪ್ಪಿಸಿದ್ದೀರಿ. ಇದು

ಮೊದಲನೆಯ ಕಾರ್ಯಕ್ರಮವಾಗಿ ತಾವು ತೆಗೆದುಕೊಂಡಿದ್ದೀರಿ, ಅದು ನಿಜ. ನೀವು ಸಿ.ಓ.ಡಿ.ಗೆ ಕೊಡಲು ಓಪಿನಿಯನ್ ತೆಗೆದುಕೊಂಡ ಮೇಲೆ ಅವರ ಓಪಿನಿಯನ್ ಏನು ಇದರ ಬಗ್ಗೆ ಎಂಬುದನ್ನು ತಾವು ಕೇಳಬಹುದಾಗಿತಲ್ಲಾ. ಇದರ ಬಗ್ಗೆ ಏನು ಮಾಡೋಣ ಎಂಬುದನ್ನಾದರೂ ತಾವು ಕೇಳಬಹುದಾಗಿತ್ತು. ಆದರೆ ಅದನ್ನೂ ಕೂಡ ನೀವು ಮಾಡಲಿಲ್ಲ. ಇದು ಏನನ್ನು ತೋರಿಸುತ್ತದೆಂದರೆ ಇದರಲ್ಲಿ ಮಂತ್ರಿಗಳ ಕೈವಾಡ ಬಹಳ ಜಾಸ್ತಿಯಾಗಿರುವುದರಿಂದ ಸಿ.ಓ.ಡಿಯವರು ಸರಿಯಾದ ನ್ಯಾಯ ಕೊಡುತ್ತಾರೆಯೇ ಎಂಬುದು ಅನುಮಾನವಿರುವುದರಿಂದ ಅದಕ್ಕೋಸ್ಕರ ನಾನು ತಮ್ಮ ಮುಂದೆ ಎರಡು ಬೇಡಿಕೆಗಳನ್ನು ಇಡುತ್ತಿದ್ದೇನೆ. ಈ ಬಗ್ಗೆ ಸಿಬಿಐ ಗೆ ತನಿಖೆ ಮಾಡಲು ಒಪ್ಪಿಸಿದರೆ ನನ್ನದೇನೂ ತಕರಾರಿಲ್ಲ. ಒಂದು ವೇಳೆ ಸಿ.ಓ.ಡಿ. ಎನ್‌ಕ್ವೆರಿಯನ್ನೇ ಮುಂದುವರಿಸುವುದಾದರೆ ಮಂತ್ರಿಗಳಿಗೆ ಕೇಸ್ ಮುಗಿಯುವವರೆಗೆ ರಜಾ ಕೊಡಿ.

ಶ್ರೀ ಸಿ. ಭೈರೇಗೌಡ : ಹೇಗೆ ರಜಾ ಕೊಡುವುದಕ್ಕಾಗುತ್ತದೆ?

ಶ್ರೀ ವೈ. ರಾಮಕೃಷ್ಣ : ಅದು ನಿಮಗೆ ಸೇರಿದು ರೂಲ್ಸ್ ಪ್ರಕಾರ ನೀವು ಮಾಡಿ. ಏಕೆಂದರೆ ಇದು ನಗುವ ಸಾಮಾನ್ಯ ವಿಚಾರವಲ್ಲ. ಇದು ನಮ್ಮ ಜಿಲ್ಲೆಯಲೆಲ್ಲಾ ಮನೆ ಮಾತಾಗಿದೆ. ಇಂದು ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಲಾ ಅಂಡ್ ಆರ್ಡರ್ ವ್ಯವಸ್ಥೆ ಸಂಪೂರ್ಣವಾಗಿ ಇಲ್ಲವಾಗಿದೆ. ಸನ್ಮಾನ್ಯ ಭೈರೇಗೌಡರು ಪ್ರತಿಯೊಂದಕ್ಕೆ ಉತ್ತರ ಕೊಡುತ್ತಾರೆ, ಆದರೆ ಇದೊಂದಕ್ಕೆ ಮಾತ್ರ ಉತ್ತರ ಕೊಡುವುದಕ್ಕೆ ಅವರು ಹೋಗುವುದಿಲ್ಲ. ಸಾವುಗಳು ಏಕೆ ಹೀಗಾಗುತ್ತವೆ, ನೂರಾರು ಕೊಲೆಗಳು ಏಕೆ ಹೀಗಾಗುತ್ತವೆ? ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಇವರಿಗೆ ಆಗುವುದಿಲ್ಲ.

ಶ್ರೀ ಸಿ. ಭೈರೇಗೌಡ : ಇವೆಲ್ಲಾ ಏನು ನಿನ್ನೆ ಮೊನ್ನೆಯಿಂದ ನಡೆದುಕೊಂಡು ಬಂದಿರುವುದಲ್ಲ. ಇದು ಎಷ್ಟೋ ಕಾಲದಿಂದ ನಡೆದುಕೊಂಡು ಬಂದಿರುವಂಥವುಗಳಾಗಿವೆ. ಯಾವುದೋ ಒಂದೆರಡು ಘಟನೆಗಳು ಈ ರೀತಿಯಲ್ಲಿ ನಡೆದಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆ ಇಲ್ಲವೇ ಇಲ್ಲ ಎಂದು ನಿಮ್ಮಂಥವರೇ ಈ ರೀತಿಯಲ್ಲಿ ಮಾತನಾಡಿದರೆ ಏನು ಹೇಳಬೇಕೋ ಗೊತ್ತಿಲ್ಲ.

ಶ್ರೀ ವೈ. ರಾಮಕೃಷ್ಣ : ನನ್ನಂಥವರೇ ಮಾತನಾಡಬೇಕು, ಇನ್ನೆಂಥವರು ನಿಮಗೆ ಮಾತನಾಡಬೇಕು? ಕೋಲಾರದಲ್ಲಿ ಎಷ್ಟೆಷ್ಟು ಕೊಲೆಗಳಾಗಿವೆ ಎಂದು ಕೇಳಿದರೆ ಅದನ್ನೂ ಕೂಡ ಹೇಳಿ ಬಿಡುತ್ತೇನೆ. ಇದಕ್ಕೆ ಟೈಮ್ ಫಿಕ್ಸ್ ಮಾಡಿ.

ಶ್ರೀ ಸಿ. ಭೈರೇಗೌಡ : ಹೇಳಿ, ಬೇಡ ಎಂದವರ್ಯಾರು, ಈ ಬಗ್ಗೆ ಸರ್ಕಾರದಲ್ಲಿ ಅಧಿಕೃತವಾದ ದಾಖಲೆಗಳು ಇದ್ದೇ ಇರುತ್ತದೆ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಸ್ಟೂರಿನಲ್ಲಿ ಇಂಥ ಘಟನೆ ನಡೆದಿದೆ, ಇದರಲ್ಲಿ** ಇವರನ್ನು ಡಿಫೆಂಡ್ ಮಾಡಿಕೊಳ್ಳುತ್ತೀರಾ?

ಶ್ರೀ ಸಿ. ಭೈರೇಗೌಡ : ಯಾರನ್ನು ಡಿಫೆಂಡ್ ಮಾಡುತಿದ್ದೀರಿ ಎಂದು ಹೇಳುತ್ತಿದ್ದೀರಿ ನಾನು ಹೇಳಿದ್ದು ಇಂಥ ಘಟನೆಗಳು ನದುಕೊಂಡು ಬಂದಿದೆ ಎಂದು. ಮತ್ತು ಹಿಂದೆ ನಡೆದಿದೆ ಎನ್ನತಕ್ಕಂಥದ್ದನ್ನು ಹೇಳಿದ್ದು. ನಾನು ಡಿಫೆಂಡ್ ಮಾಡುತ್ತಿದ್ದೇನೆ ಎಂದು ಹೇಳಲಿಲ್ಲ. ಎಲ್ಲಿ ಕಾನೂನಿನ ಕ್ರಮ ತಪ್ಪಿದೆ. ಅಂಥವುಗಳನ್ನು ಹೇಳಿ.

ಶ್ರೀ ವೈ. ರಾಮಕೃಷ್ಣ : ಎಲ್ಲಿ ಕಾನೂನು ತಪ್ಪಿದೆಯೆಂದರೆ, ದಿನಾಂಕ 22ನೇ ತಾರೀಖು ಮಂತ್ರಿಗಳು ಪತ್ರವನ್ನು ಬರೆಯುತ್ತಾರೆ, ಅದು ಒಂದೇ ದಿವಸದಲ್ಲಿ ಲಾ ಡಿಪಾರ್ಟ್‌ಮೆಂಟಿನಲ್ಲಿ ಪ್ರೊಸಸ್ ಆಗಿ ಆರ್ಡರ್ ಇಶ್ಯೂ ಆಗಿಬಿಟ್ಟಿದೆ. ಈ ರೀತಿಯಾದರೆ ನ್ಯಾಚುರಲ್ ಜಸ್ಟೀಸ್ ಬಡವರಿಗೆ ಇದರಲ್ಲಿ ಎಲ್ಲಿ ಸಿಗುತ್ತದೆ? ಬಹುಶಃ ಇಂಥದ್ದನ್ನು ಮಾಡಿಕೊಂಡು ಹೋದರೆ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಡಿಟೀರಿಯೇಟ್ ಆಗುವುದಿಲ್ಲವೇ? ಬಹಶಃ ನನಗನ್ನಿಸುತ್ತದೆ ಈ ವಿಚಾರದಲ್ಲಿ ಪರಮಾತ್ಮನೇ ಕಾಪಾಡಬೇಕು ನಮ್ಮನ್ನು. ಇದು ನಿಜ ಆಗುತ್ತಿದೆ. ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜನರು ಈ ರೀತಿಯಾಗಿ ಸತ್ತಿದ್ದಾರೆ ಎಂಬುದಕ್ಕೆ ನಾನು ಪಟ್ಟಿ ಕೊಡಲು ಸಿದ್ಧನಾಗಿದ್ದೇನೆ. ನಾನು ಹೇಳುತ್ತಿದ್ದೇನೆ, ಕಳೆದ ಅಧಿವೇಶನ ಮುಗಿದು ಮತ್ತೆ ಈ ಅಧಿವೇಶನ ಸೇರುವ ಮಧ್ಯದ 15 ದಿವಸಗಳ ಅವಧಿಯಲ್ಲಿ ತಾಲ್ಲೂಕಿನಲ್ಲಿ 5 ಕೊಲೆಗಳಾಗಿವೆ ಒಂದೇ ದಿವಸ ದೊಮ್ಮಸಂದ್ರದಲ್ಲಿ ಇಬ್ಬರು, ನಿನ್ನೆ ದಿವಸ ಕೂಡ 20 ವರ್ಷದ ಹುಡುಗ ಸತ್ತಿದ್ದಾನೆ, ಈ ರೀತಿ ಸಾಯಲು ಏನು ಕಾರಣ? ನಾನು ಒಂದು ಸಾರಿ ಹೋಗಿ ಹೇಳಿದೆ, ಕೇಳಿಕೊಂಡೆ, ರಿಕ್ವೆಸ್ಟ್ ಮಾಡಿಕೊಂಡೆ, ಕಿವಿ ಮಾತನ್ನು ಕೂಡ ಹೇಳಿದೆ, ಏನು ಮಾಡಿದರೂ ಕೂಡ ಸರ್ಕಾರ ಅಲುಗಾಡುವುದೇ ಇಲ್ಲವಲ್ಲಾ ಈ ಸರ್ಕಾರ. ಕಡೇ ಪಕ್ಷ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಬಗ್ಗೆ ಯಾದರೂ ಸರ್ಕಾರ ಅಲ್ಲಾಡಬೇಕು. ಈ ಕಾನೂನು ಮತ್ತು ಸುವ್ಯವಸ್ಥೆಯಲ್ಲೂ ಅಲ್ಲಾಡದ ಮೇಲೆ Is it worthy to be a Government? ನಮಗೆ ಪ್ರೊಟೆಕ್ಷನ್ ಕೊಡದಿದ್ದ ಮೇಲೆ ಸರ್ಕಾರ ಏಕೆ ಇರಬೇಕು? ದಯವಿಟ್ಟು ಇದನ್ನು ತಾವು ಅಲೋಚನೆ ಮಾಡಿಸೋಣ. ಅದರಲ್ಲೂ ತಾವು ಲಾ ಡಿಪಾರ್ಟ್‌ಮೆಂಟಿನವರು, ತಾವು ಏನು ಇದರ ಬಗ್ಗೆ ಪ್ರೊಸೀಜರ್ ಫಾಲೋ ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ನಾನು ಹೇಳಿದೆನಲ್ಲಾ ಫ್ಯಾನಲ್ ಆಫ್ ಅಡ್ವೊಕೇಟ್ಸ್

ತೆಗೆದುಕೊಂಡಿದ್ದೀರಾ? ಓಪಿನಿಯನ್ ಆಫ್ ಡಿಸ್ಟ್ರಿಕ್ಟ್ ಜಡ್ಜ್ ತೆಗೆದುಕೊಂಡಿದ್ದೀರಾ ಅಥವಾ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ತೆಗೆದುಕೊಂಡಿದ್ದೀರಾ ಅಥವಾ ಬೇರೆ ಯಾವುದಾದರೂ ಸೋರ್ಸ್ ಇದ್ದರೆ ಅದರ ಓಪಿನಿಯನ್ ತೆಗೆದುಕೊಂಡಿದ್ದೀರಾ, ಆ ರೀತಿ ತೆಗೆದುಕೊಂಡು ಇದನ್ನು ಮಾಡಿದ್ದರೆ ಇಂದು ಈ ಅಡ್ವಕೇಟ್‌ನನ್ನು ಅಪಾಯಿಂಟ್ ಮಾಡುವ ಪ್ರಸಂಗವೇ ಬರುತ್ತಿರಲಿಲ್ಲ. ಆದುದಿಂದ ನಾನು ಎರಡು ಬೇಡಿಕೆಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಮೊದಲನೆಯ ಬೇಡಿಕೆ ಈ ಕೆಲಸನ್ನು ಸಿ.ಬಿ.ಐ.ಗೆ ಒಪ್ಪಿಸಿ, ಇದರಿಂದ ನ್ಯಾಚುರಲ್ ಜಸ್ಟೀಸ್ ಸಿಗುತ್ತದೆ. ಎರಡನೆಯದಾಗಿ ಒಂದು ವೇಳೆ ಸಿ.ಓ.ಡಿಯವರೇ ಈ ಕೇಸ್‌ನ್ನು ಮುಂದುವರೆಸುವುದಕ್ಕೆ ತಾವು ಒಪ್ಪಿಕೊಂಡರೆ ಇದಕ್ಕೆ ಸಂಬಂಧಪಟ್ಟ ಹಾಗೆ ಹಸ್ತಕ್ಷೇಪ ಮಾಡಲು ಆಗದಿರುವಂತೆ ಮಾಡಲು ಸನ್ಮಾನ್ಯ ಮಂತ್ರಿಗಳಿಗೆ ಅಂದರೆ ಈ ಕೇಸ್ ಮುಗಿಯುವವರೆಗೆ ಬಚ್ಚೇಗಾಡರಿಗೆ ರಜಾ ಕೊಡಿ ಮತ್ತು ರಜಾ ಕೊಡಿ. ಮತ್ತು ರಜಾ ಕೊಟ್ಟು ಮನಗೆ ಕಳುಹಿಸಿ.

ಶ್ರೀ ಆರ್. ರೋಷನ್ ಬೇಗ್ (ಗೃಹ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಾದ ಖರ್ಗೆಯವರು ಮತ್ತು ಹಿರಿಯ ಸದಸ್ಯರಾದ ರಾಮಕೃಷ್ಣರವರು ಹೇಳಿದಂಥ ವಿಚಾರಗಳನ್ನು ಕೇಳಿದ್ದೇನೆ. ಈ ಘಟನೆ ಬಗ್ಗೆ ಯಾರ ಹಸ್ತಕ್ಷೇಪವೂ ಇಲ್ಲ. It was an act which has to be condemned by every body, whether he is in ruling party or in opposition.

ಆ ರೀತಿಯ ಘಟನೆ ನಡೆಯುವುದಕ್ಕೆ ಕಾರಣ ಆ ಊರಿನಲ್ಲಿ ಎರಡು ಗುಂಪುಗಳ ನಡುವೆ ಇರುವ ವೈಪೋಟಿ. ಇವರು ಅವರಿಗೆ ಹೊಡೆದಿದ್ದಾರೆ, ಅವರು ಇವರಿಗೆ ಹೊಡೆದಿದ್ದಾರೆ. ಆದರೆ ಅಲ್ಲಿ ಹೋಗಿ ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಿ ಹೊಡೆದು ರೇಪ್ ಮಾಡಿರುವುದು It is highly condemnable one and I assure on the Floor of this House and I assure to the Opposition Leader and Sri Y. Ramakrishna that we will see that this case is entrusted C.O.D. and within few days the culprits will be arrested and due action will be taken. As far as the legal aspect is concerned, the Hon'ble Minister Sri Nanaiah wil answer.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಏಕೆ ಈ ಕೇಸ್‌ನ್ನು ಸಿ.ಓ.ಡಿ.ಗೆ ವಹಿಸಿಬೇಡಿ ಎಂದು ಹೇಳುತ್ತಿದ್ದೇವೆಂದರೆ ಈ ಕೇಸ್‌ನಲ್ಲಿ ನೇರವಾಗಿ ಮಂತ್ರಿಗಳ ಕೈವಾಡವಿದೆ, ಅವರ

ಸಪೋರ್ಟ್ ಇದೆ, ಅಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ಅಪಾಯಿಂಟ್ ಮಾಡುವುದರಲ್ಲೂ ಕೂಡ ಅವರ ಹಸ್ತಕ್ಷೇಪ ಇದೆ ಎನ್ನತಕ್ಕಂಥದ್ದು ಈಗಾಗಲೇ ಬಹಿರಂಗವಾಗಿದೆ. ನೀವು ಇದನ್ನು ಮುಚ್ಚಿಡುವುದಕ್ಕಾಗುವುದಿಲ್ಲ ಆದಕ್ಕೋಸ್ಕರ ಇಲ್ಲಿ ಪ್ರಭಾವ ಬೀರುವ ಕೆಲಸ ಇದರಲ್ಲಾಗುತ್ತದೆಯಾದ ಕಾರಣ ಇದನ್ನು ಸಿ.ಬಿ.ಐ.ಗೆ ಒಪ್ಪಿಸಿ. ಏಕೆಂದರೆ You are not interested. You don't want to hide anything and you don' t want to protect the persons who are culprits. You want to give them punishment.

ಆದುದರಿಂದ ನಾನು ಕೇಳುತ್ತಿದ್ದೇನೆ, ಇದನ್ನು ಏಕೆ ನೀವು ಸಿ.ಬಿ.ಐಗೆ ಒಪ್ಪಿಸಬಾರದು? ಈ ರೀತಿ ಒಪ್ಪಿಸಿದರೆ ನಿಮಗೆ ಯಾವ ತಾಪತ್ರಯಗಳೂ ಕೂಡ ಬರುವುದಿಲ್ಲ. ಒಂದು ವೇಳೆ ರಾಮಕೃಷ್ಣರವರು ಈಗಾಗಲೇ ಹೇಳಿದ ಹಾಗೆ ನಿಮಗೆ ಸಿ.ಓ.ಡಿ. ತನಿಖೆಯೇ ಆಗಬೇಕು ಎಂಬುದಾದರೆ Let the Minister resign. ಅವರು ಆ ಜಾಗದಲ್ಲಿ ಇರಬಾರದು. ಇಲ್ಲ, ಅವರು ಆ ಜಾಗದಲ್ಲಿ ಇರಬೇಕು ಎಂಬುದಾದರೆ ನೀವು ಇದನ್ನು ಸಿ.ಬಿ.ಐ.ಗೆ ಒಪ್ಪಿಸಿ. ಎರಡರಲ್ಲಿ ಒಂದು ಆಗಬೇಕು. ಇಲ್ಲದಿದ್ದರೆ These are the only two alternatives. ಇದಾದ ಮೇಲೆ ಸ್ಪೆಷಲ್ ಪ್ರಾಸಿಕ್ಯೂಟರ್ ನೇಮಕಾತಿಯನ್ನು ಕೂಡ ರದ್ದು ಮಾಡಬೇಕು. That you have to do.

+ ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸಭಾದ್ಯಕ್ಷರೇ, I don't know what is the role of the Minister in this. ಪ್ರತಿಕೆಯಲ್ಲಿ ಬಂದಿದೆ ಎಂದು ಹೇಳಿ ಶ್ರೀಮಾನ್ ಬಚ್ಚೇಗೌಡರ ಪಾತ್ರ ಇದರಲ್ಲಿ ಇದೆ ಎಂದು ಹೇಳುತ್ತಿದ್ದಾರೆ. ಅಧ್ಯಕ್ಷರೇ, ನಾನು ಬಂದಿರತಕ್ಕಂಥ ಕ್ಷೇತ್ರದಲ್ಲಿ ಅಥವಾ ಇನ್ಯಾರಾದರೂ ಶಾಸಕರು ಬಂದಿತಕ್ಕಂಥ ಕ್ಷೇತ್ರದಲ್ಲಿ ಏನಾದರೂ ಈ ರೀತಿಯ ಘಟನೆಗಳಾದರೆ ಅಲ್ಲಿರತಕ್ಕಂಥ ಮಂತ್ರಿಗಳು ಅಥವಾ ಶಾಸಕರು ಇದರಲ್ಲಿ ಭಾಗಿಯಾಗಿದ್ದಾರೆಂದು ಎಲ್ಲಾ ಊರುಗಳಲ್ಲಿ ಆಗುವ ಘಟನೆಗಳಿಗೆ ಸಂಬಂಧಪಟ್ಟಂತೆ ನೇರವಾಗಿ ಹೇಳಿಕೊಂಡು ಹೋಗುವಂಥಾಗುತ್ತದೆಯಷ್ಟೆ. ಯಾವ ಆಧಾರದ ಮೇಲೆ ಎಂದು ಹೇಳಬೇಕಾಗುತ್ತದೆ? ಈಗ ನೀವು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳುತ್ತೀರಿ. ಬಚ್ಚೇಗೌಡರು ಅವರು ರಿಲೇಷನ್ಸ್, ಆದುದರಿಂದ ಅವರ ಹಸ್ತಕ್ಷೇಪವಿದೆ ಎಂದು ಹೇಳುತ್ತೀರಿ. ಆದರೆ ಸಿ.ಓ.ಡಿ.ಯವರು ಮಾಡುತ್ತಿರುವ ಈ ತನಿಖೆಯಲ್ಲಿ ಯಾರಿಂದಲೂ ಹಸ್ತಕ್ಷೇಪವಿಲ್ಲ. ಇದನ್ನು ನೇರವಾಗಿ ಸರ್ಕಾರದ ವತಿಯಿಂದ ಹೇಳುತ್ತಿದ್ದೇನೆ. ಸಂಶಯ ಇಲ್ಲಿ ಬರುತ್ತಿರುವುದು, ಯಾವುದೋ

ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿಕೊಂಡು ಇದರಲ್ಲಿ ಮಂತ್ರಿಗಳ ಹಸ್ತಕ್ಷೇಪವಿದೆಯಾದ ಕಾರಣ ಇದನ್ನು ಸಿ.ಬಿ.ಐ.ಗೆ ಒಪ್ಪಿಸಿ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ನಮ್ಮಲ್ಲೂ ಸಿ.ಓ.ಡಿ. ತನಿಖಾ ತಂಡ ಇದೆ, ಎಲ್ಲರೂ ಈ ತನಿಖಾ ತಂಡದ ಕಾರ್ಯವೈಖರಿಯನ್ನು ಮೆಚ್ಚಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಬಹುಶಃ ನಮ್ಮಲ್ಲಿರತಕ್ಕಂಥ ಸಿ.ಓ.ಡಿ. ತನಿಖಾ ತಂಡದ ಮೇಲೆ ನಮಗೆ ವಿಶ್ವಾಸ ಇಲ್ಲದ ಹಾಗೆ ಪರಿಸ್ಥಿತಿ ನಿರ್ಮಾಣವಾದರೆ ಮತ್ತು ಪ್ರತಿಯೊಂದು ಕೇಸ್‌ನ್ನು ಸಿ.ಬಿ.ಐ.ಗೆ ಒಪ್ಪಿಸಬೇಕು ಎಂದರೆ ಇಂಥ ಎಷ್ಟೋ ಪ್ರಕರಣಗಳು ನಡೆಯುತ್ತವೆ. ಆಗ ಎಲ್ಲಾ ಪ್ರಕರಣಗಳನ್ನು ಸಿ.ಬಿ.ಐ.ಗೆ ಒಪ್ಪಿಸುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಭಾಧ್ಯಕ್ಷರೇ, Where the Minister is interested, in such cases we are asking and not in every case...

ನಾನು ಎಲ್ಲವನ್ನೂ ಕೇಳುತ್ತಿಲ್ಲ. ಈ ಕಂಪ್ಲೆಂಟ್‌ಗೆ ಸಂಬಂಧಪಟ್ಟಂತೆ ಎವಿಡೆನ್ಸ್ ಎಲ್ಲವನ್ನೂ ರೆಕಾರ್ಡ್ ಮಾಡಿದ್ದಾರೆ. ರೆಕಾರ್ಡ್ ಮಾಡುವ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳು ಬಂದಿವೆ. ಆಸ್ಪತ್ರೆಯಲ್ಲಿ ಕೂಡ ಈ ವಿಚಾರ ಬೆಳಕಿಗೆ ಬಂದಿದೆ. ಕೇವಲ ಪತ್ರಿಕೆಯಲ್ಲಿ ಬಂದಿರುದಷ್ಟೇ ಅಲ್ಲ. ಪತ್ರಿಕೆಯಲ್ಲಿ ಸಂಪೂರ್ಣವಾಗಿ ಓದಿ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ರಾಜಕಾರಣದಲ್ಲಿರುವವರು. ಅವರೂ ಕೂಡ ಹಿಂದೆ ಮಂತ್ರಿಯಾಗಿದ್ದವರು. ಅವರು ಮತ್ತು ನಾವೆಲ್ಲರೂ ಕೂಡ ಶಾಸಕರಾಗಿ ಇಲ್ಲಿಗೆ ಬಂದಿರತಕ್ಕಂಥವರು. ಆಡಳಿತ ಪಕ್ಷದಲ್ಲಿ ಇರುತ್ತೇವೆ ಮತ್ತು ವಿರೋಧಪಕ್ಷದಲ್ಲೂ ಇರುತ್ತೇವೆ. ನಮ್ಮ ನಮ್ಮ ಗ್ರಾಮಗಳಲ್ಲಿ ಅಥವಾ ಮತಕ್ಷೇತ್ರಗಳಲ್ಲಿ ತಂಟೆಗಳು ಇರಬಹುದು. ಯಾವುದೋ ಒಂದು ಜಾಗದಲ್ಲಿ ಮರ್ಡರ್ ಆಗಿರಬಹುದು ಆಗ ಅದಕ್ಕೆ ಪ್ರತೀಕಾರವಾಗಿ ಇನ್ನೊಂದು ಭಾಗದಲ್ಲಿ ಗಲಭೆಯಾದರೆ ಆಗ ಅದಕ್ಕೆ ಮಂತ್ರಿಗಳು ಹಸ್ತಕ್ಷೇಪವಿದೆ ಎಂದು ಸೇರಿಸುವುದಕ್ಕೆ ಆಗುತ್ತದೆಯೆ? ಈ ಒಂದು ಪರಿಸ್ಥಿತಿ ನಿರ್ಮಾಣವಾದರೆ ಪ್ರತಿ ಕ್ಷೇತ್ರದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಆಗುವ ಕೊಲೆ ಪ್ರಕರಣಗಳಲ್ಲಿ ಎಲ್ಲಾ ಶಾಸಕರ ಅಥವಾ ಮಂತ್ರಿಗಳ ಹೆಸರನ್ನು ಸೇರಿಸಬೇಕಾದ ಪರಿಸ್ಥಿತಿ ನಿರ್ಮಾಣವಾದೀತು. ಇವೊತ್ತು ರಾಜಕಾರಣ ಎಲ್ಲಿ ಇರುವುದಿಲ್ಲ? ರಾಜಕಾರಣ ಆಡಳಿತ ಪಕ್ಷದಲ್ಲಿ ಮತ್ತು ವಿರೋಧ ಪಕ್ಷದಲ್ಲಿ ಇದ್ದೇ ಇರುತ್ತದೆ. ಹೀಗಿರುವಾಗ ಕೇವಲ ರಾಜಕಾರಣವನ್ನೇ ಇಟ್ಟುಕೊಂಡು ಇವೊತ್ತು ಆಡಳಿತ ಪಕ್ಷದಲ್ಲಿರುವ ಒಬ್ಬ ಮಂತ್ರಿಗಳ ವಿರುದ್ಧ ಇವರು ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಮಂತ್ರಿಗಳೇ ತಮ್ಮ ಲೆಟರ್‌ಹೆಡ್‌ನಲ್ಲಿ ಇಂಥವರನ್ನು ಅಪಾಯಿಂಟ್ ಮಾಡಿ ಎಂದು ಹೇಳಿದರೆ..

**7.30 ಪಿ. ಎಂ**

(Intirruptions)

Sri M.C. Nanaiah : I will come to that. I will not suppress anything. How can you say that there was direct interference by the Minister? In what way he is interested about it? A man who has been murdered may be his distant relative.

ಅವರು ಮತಕ್ಷೇತ್ರಕ್ಕೆ ಸೇರಿತಕ್ಕಂಥವರು. ಆ ಕ್ಷೇತ್ರದಲ್ಲಿ ಅವರು ಅನಿವಾರ್ಯವಾಗಿರತಕ್ಕಂಥವರು ನಮ್ಮ ನಮ್ಮ ಕೇತ್ರದಲ್ಲಿ ನಮಗೆ ಬೇಕಾಗಿರತಕ್ಕಂಥವರು ಯಾರಾದರೂ ಕೊಲೆಯಾದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆಯೇ? ನಾವೂ ಕೂಡ ಸರ್ಕಾರದಿಂದ ಹೇಳುತ್ತಿದ್ದೇವೆ, ಈ ಒಂದು ಕೊಲೆ ನಡೆದಿದೆ, ಬಹಳ ಅಮಾನುಷವಾದಂತಹ ಘಟನೆ ನಡೆದಿದೆ. ತಾವು ದಯವಿಟ್ಟು ಕ್ರಮಕೈಗೊಳ್ಳಿ ಎಂದು ಹೇಳುವುದು ಯಾವ ಕ್ಷೇತ್ರದಲ್ಲಿ ಇದು ನಡೆಯುವುದಿಲ್ಲ ನಮ್ಮ ಪಕ್ಷಕ್ಕೆ ಆಗಿರತಕ್ಕಂಥ ಸಂದರ್ಭದಲ್ಲಿ ಯಾರಾದರೂ ವಿರೋಧಪಕ್ಷದವರು ಆ ಒಂದು ಘಟನೆ ಮಾಡಿದಾಗ ನಾವು ಹೇಳುವುದಿಲ್ಲವೇನು ಸರ್ಕಾರದ ವಿರುದ್ಧ? ನೇರವಾಗಿ ಇವತ್ತು ಮಂತ್ರಿಗಳು ಯಾವುದೋ ಒಂದು ಕ್ಷೇತ್ರಕ್ಕೆ ಸೇರಿದವು. ಅವರ ಅಭಿಮಾನಿಗಳು ಇರಬಹುದು, ಅವರು ಸಂಬಂಧಿಕರು ಇರಬಹುದು. ಆದುದರಿಂದ ಇವರ ನೇರವಾಗಿರತಕ್ಕಂಥ ಹಸ್ತಕ್ಷೇಪ ಇದೆ. ಆದುದರಿಂದ ಅವರು ರಾಜೀನಾಮೆ ಕೊಡಲಿ, ಅದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದರೆ ನಮ್ಮ ನಮ್ಮ ಕ್ಷೇತ್ರದಲ್ಲಿ ಆಗತಕ್ಕಂಥ ಎಲ್ಲಾ ಇತರ ಕೊಲೆ ಪ್ರಕರಣಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಶಾಸಕರು, ಮಂತ್ರಿಗಳು ಎಲ್ಲರೂ ಹಸ್ತಕ್ಷೇಪ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದನ್ನು ಅಲ್ಲಿಗೆ ತಲುಪಿಸುತ್ತಾರೆಂದು ಕಾಣುತ್ತದೆ. ಆದುದರಿಂದ ಈ ಒಂದು ಪ್ರಕರಣದಲ್ಲಿ ಶ್ರೀಮಾನ್ ಬಚ್ಚೇಗೌಡರ ಹಸ್ತಕ್ಷೇಪವಾಗಲಿ, ಯಾರ ಹಸ್ತಕ್ಷೇಪವೂ ಇಲ್ಲ. ಇದರ ಬಗ್ಗೆ ಸಿ.ಓ.ಡಿ. ಯವರು ತನಿಖೆ ಮಾಡುತ್ತಿದ್ದಾರೆ. ಇದರ ಬಗ್ಗೆ ನಿಷ್ಪಕ್ಷಪಾತವಾದಂತಹ ತನಿಖೆಯನ್ನು ಮಾಡುತ್ತೇವೆ. ನಿಜ. ಈಗ ಆಗಿರತಕ್ಕಂಥ ಎರಡು ಘಟನೆಗಳಲ್ಲಿ ಎರಡು ಗುಂಪುಗಳು ಆಗಿರತಕ್ಕಂಥಾದ್ದರಲ್ಲಿ ರೌಡಿಗಳು ಇದ್ದಾರೆ ಎಂದು ಪೋಲೀಸ್ ಚಾರ್ಜ್‌ಶೀಟ್‌ನಲ್ಲಿ ಬಂದಿದೆ. ಪೋಲೀಸ್ ರಿಪೋರ್ಟ್‌ನಲ್ಲಿ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿ.ಬಿ.ಐಗೆ ಕಳುಹಿಸಿ.

ಶ್ರೀ ಎಂ. ಸಿ. ನಾಣಯ್ಯ : ಸಿ.ಬಿ.ಐ. ಗೆ ಏಕೆ? ಸಿ.ಓ.ಡಿ ಇದೆ. ನಾವು ಸರ್ಕಾರ ನಡೆಸುತ್ತಿದ್ದೇವೆ. ನಮ್ಮಲ್ಲಿ ಇವತ್ತು ಸಿ.ಓ.ಡಿಯವರ ತನಿಖಾ ತಂಡ ಇದೆ. ಆದುದರಿಂದ ಸಿ.ಓ.ಡಿ. ಯವರು ಈ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಿದ್ದಾರೆ. ಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ಬಚ್ಚೇಗೌಡರ ಯಾವುದೇ ಹಸ್ತಕ್ಷೇಪ ಈ ಪ್ರಕರಣದಲ್ಲಿ ಇಲ್ಲ. ಆದರೆ ಶ್ರೀಮಾನ್ ಬಚ್ಚೇಗೌಡರು, ವೆಂಕಟೇಶ್ ಎಂದು ಯಾರು ಕೊಲೆ ಆಗಿದ್ದಾರೆ. ಅವರ ದೂರದ ಸಂಬಂಧಿಕರು ಆಗಬೇಕು. ಆ ಕ್ಷೇತ್ರದವರು ಆಗಿದ್ದು, ಅವರ ಅಭಿಮಾನಿಗಳು ಆಗಿದ್ದಂತಹವರು ಎಂದು ಹೇಳತಕ್ಕಂಥವರು ನಮ್ಮ ಜೊತೆಯಲ್ಲಿ ಬಂದು ಮಾತನಾಡಿದ್ದು ನಿಜ. ಅದು ಆಗಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಕೆಲವು ಆ್ಯಂಟೆಸಿಪೇಟರಿ ಚೀಲ್‌ಗೆ ಮೂವ್ ಮಾಡುತ್ತಾರೆ. ಅಂತಹ ಒಂದು ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಇಂತಹ ಘಟನೆಗಳು ಬಂದಾಗ ಸರ್ಕಾರಿ ವಕೀಲರುಗಳ ಮೇಲೆ ಸರ್ಕಾರಿ ಪ್ರಾಸಿಕ್ಯೂಟರಗಳ ಮೇಲೆ ಕೆಲವು ಸಂದರ್ಭದಲ್ಲಿ ನಂಬಿಕೆ ಇಲ್ಲದ್ದಂತಹ ಸಂಶಯ ಬರುತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲರು ಸಾಯುವುದಕ್ಕಿಂತ ಕೇವಲ ಐದು ದಿವಸಕ್ಕೆ ಮುಂಚೆ ನನಗೆ ಒಂದು ಪತ್ರ ಬರೆದರು. ಅವರಿಗೆ ಆ ಪತ್ರಕ್ಕೆ ಸೈನ್ ಮಾಡುವುದಕ್ಕೆ ಆಗಿಲ್ಲ. ಬೇರೆಯವರು ಒಂದು ಸೈನ್ ಹಾಕಿದ್ದರು. ಗುಲ್ಬರ್ಗದಲ್ಲಿ ಒಂದು ಜೋಡಿ ಕೊಲೆಯಾಯಿತು. ಆ ಜೋಡಿ ಕೊಲೆಯಾಗಿರುವ ಪೈಕಿ ಅವರ ಸಂಬಂಧಿಕರಾಗಿರತಕ್ಕಂಥವರು. ಅದಕ್ಕೆ ಅವರು ಒಂದು ಪತ್ರವನ್ನು ಬರೆದು ಆ ಜೋಡಿ ಕೊಲೆ ಪ್ರಕರಣ ನಡೆದಿದೆ ಎಂದು ಹೇಳಿ ಸವಿಸ್ತಾರವಾಗಿ ಯಾರೋ ಮುಖಾಂತರ ಬರೆಸಿ, ಅವರ ಲೆಟರ್ ಹೆಡ್‌ನಲ್ಲಿ ಕಳುಹಿಸಿದರು. ಅಲ್ಲಿರತಕ್ಕಂತಹ ಒಂದು ಸ್ಟೆಷನ್ ಕಾನ್ಸಿಲ್‌ನ್ನು ಮಾಡಬೇಕೆಂದು ಮಾಡಿದರು. ಮಾನ್ಯ ವಿರೇಂದ್ರ ಪಾಟೀಲರು ಏಳು ದಿವಸದ ಮುಂಚೆ ಅವರು ನನ್ನ ಜೊತೆಯಲ್ಲಿ ಮಾತನಾಡಬೇಕೆಂದು ಬಯಸಿದ್ದರು. ಆಗ ನಾನು ಇರಲಿಲ್ಲ. ನಾನು ಇಲ್ಲಿ ಇದ್ದಿದ್ದರೆ ನಾನೇ ನೇರವಾಗಿ ಅವರ ಜೊತೆಯಲ್ಲಿ ಮಾತುಕತೆ ಮಾಡುತ್ತಿದ್ದೆ. ಪತ್ರ ಬಂದಾಕೂಡಲೇ ಕಾರ್ಯದರ್ಶಿಯನ್ನು ಕರೆದೆ. ಇವರು ಏನು ಕೇಳಿದ್ದಾರೆಂದರೆ ಆ ಭಾಗದಲ್ಲಿ ಇರತಕ್ಕಂಥ ಹಿರಿಯ ವಕೀಲರನ್ನು ನೇಮಕ ಮಾಡಬೇಕೆಂದು ಕೇಳಿದರು. ನಾನು ಚರ್ಚೆ ಮಾಡಿದನಂತರ ಅವರನ್ನು ನೇಮಕ ಮಾಡಿದೆ. ಈ ಪ್ರಕರಣದಲ್ಲಿ ಕೂಡ ಅವರು ಬಂದು ಮಾತನಾಡಿದಂತಹ ಸಂದರ್ಭದಲ್ಲಿ ನಾನು ಹೇಳಿದೆ. ನಮ್ಮಲ್ಲಿರತಕ್ಕಂಥ ಉತ್ತಮವಾಗಿರತಕ್ಕಂಥ ಒಬ್ಬ ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ಕಳುಹಿಸಿಕೊಡುತ್ತೇನೆಂದು ಹೇಳಿದೆ. ನಮ್ಮಲ್ಲಿ ಬೇಕಾದಷ್ಟು ಒಳ್ಳೆಯ ಪ್ರಾಸಿಕ್ಯೂಟರ್ ಇದ್ದಾರೆ. ಎಲ್ಲರೂ ಒಳ್ಳೆಯವರೆಂದು ಹೇಳುವುದಕ್ಕೆ ತಯಾರಾಗಿಲ್ಲ. ಬಹಳ ಒಳ್ಳೆಯವರಿದ್ದಾರೆ. ಅಲ್ಲಿ ಇಲ್ಲಿ ಕೆಲವರು ಕೆಟ್ಟವರು ಇರುತ್ತಾರೆ. ಯಾರಿಲ್ಲ? ರಾಜಕಾರಣಿಗಳಲ್ಲಿ ಕೆಲವರು

ಇರುವಾಗ ನಮ್ಮ ಅಧಿಕಾರ ವರ್ಗದಲ್ಲಿ ನಮ್ಮ ಸರ್ಕಾರದಲ್ಲಿ ಇರುವಂತಹ ಗೌವರ್ನ್‌ಮೆಂಟ್ ಪ್ಲೀಡರ್ಸ್ ಆಗಲಿ, ಪ್ರಾಸಿಕ್ಯೂಟರ್ಸ್‌ನಲ್ಲಿ ಕೆಲವು ಜನ ಇದ್ದಾರೆ. ಆದರೆ ಬೇಕಾಗಿರತಕ್ಕಂಥ ಒಬ್ಬ ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ನಾನೇ ಒಂದು ಕೇಸ್‌ನಲ್ಲಿ ತಾವೇ ಹೋಗಬೇಕೆಂದು ಕೇಳಿದೆ. ಅವರಿಗೆ ಈಗಾಗಲೇ 3-4 ಕೇಸ್ ಕೊಟ್ಟಾಯಿತು. ಅವರು ಹೇಳಿದರು ನನ್ನ ಕೈಯಲ್ಲಿ ಬೇಕಾದಷ್ಟು ಕೇಸ್ ಇದೆ. ನನಗೆ ಇದನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದು. ಕೊನೆಗೆ ಆ ಸಂದರ್ಭದಲ್ಲಿ ಅವರು ಹೇಳಿದರು, ಈ ಹಿಂದೆ ಒಬ್ಬ ಮಾಜಿ ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ಆಗಿರತಕ್ಕಂಥವರನ್ನು ನೀವು ನೇಮಕ ಮಾಡಿಕೊಳ್ಳಿ ಎಂದ ಶ್ರೀಮಾನ್ ತಿಮ್ಮರಾಯಪ್ಪ ಎಂದು ಹೇಳತಕ್ಕಂಥವರನ್ನು ನಮ್ಮನ್ನು ಕೇಳಿದರು. ಅವರು ಮಾಜಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು. ಒಳ್ಳೆಯ ಕ್ರಿಮಿನಲ್ ಅಡ್ವೋಕೇಟ್ ಆಗಿದ್ದರು ಅವರ ಜೊತೆಯಲ್ಲಿ ಕೊಲೆಗೆ ಸಂಬಂಧಪಟ್ಟ ಹಾಗೆ ದೂರನ್ನು ತಂದಿರತಕ್ಕಂಥ ಇನ್ನು 2-3 ಜನ ಬಂದಿದ್ದರು. ಅವರು ನನಗೆ ಯಾರು ಎಂದು ಗೊತ್ತಿಲ್ಲ. ನಾನು ತಿಮ್ಮರಾಯಪ್ಪ ಅವರನ್ನು ಮಾಡಬೇಕೆಂದು ಹೇಳಿ ಕಾರ್ಯದರ್ಶಿಯವರನ್ನು ಕರೆದು ವಿಚಾರ ಮಾಡಿ ಎಂದು ಹೇಳಿದೆ. ವಿಚಾರ ಮಾಡಿಯಾದ ಮೇಲೆ ತಿಮ್ಮರಾಯಪ್ಪ ಅವರನ್ನು ನೇಮಕ ಮಾಡಿದೆವು. ಆದರೆ ತಿಮ್ಮರಾಯಪ್ಪ ಇದಕ್ಕೆ ಒಪ್ಪಲಿಲ್ಲ. ಇದಾದ ಮೇಲೆ ಅವರು ಬೇರೆ ಒಬ್ಬರ ಹೆಸರನ್ನು ಅವರು ಕೊಟ್ಟರು. ಅದು ಯಾರು ಎಂದು ನನಗೆ ಗೊತ್ತಿಲ್ಲ. ಈಗ ನೀವು ಹೇಳುತ್ತಿರತಕ್ಕಂಥಾದ್ದು, ಟೋನಿ ಸಭಾಸ್ಟಿಯನ್ ಎಂದು ಹೆಸರು ಕೊಟ್ಟರು. ನಾವು ಎಲ್ಲಾ ಸಂದರ್ಭದಲ್ಲಿ ಈ ರೀತಿಯ ಆಜ್ಞೆ ಮಾಡುವುದಿಲ್ಲ. ನಾನು ಕಾನೂನು ಮಂತ್ರಿಯಾದಮೇಲೆ ಮಾಡಿರತಕ್ಕಂಥಾದ್ದು 2-3 ಇರಬಹುದು. ನಾನು ಮಾಡುವುದಿಲ್ಲ. Our Public Prosecutors are efficient and good. They have got the power to discharge their duties. I am the lastman to do that. ಏಲ್ಲೋ ಒಂದು ಕಡೆ compeling circumstances ಬಂದಂತಹ ಸಂದರ್ಭದಲ್ಲಿ ನಾವು ಇದನ್ನು ಮಾಡುತ್ತೇವೆ. ಆದರೆ ಯಾರ ಮುಖಾಂತರ ಯಾರು ಕಂಪ್ಲೇಟ್ ತೆಗೆದುಕೊಳ್ಳುತ್ತಾರೇ? ಕಂಪ್ಲೇನೆಂಟ್ ಯಾರು ಬರುತ್ತಾರೆ, ಸತ್ತವರ ಸಂಬಂಧಿಕರು ನಮ್ಮ ವಕೀಲರುಗಳ ಮೇಲೆ ಸ್ವಲ್ಪ ಸಂಶಯ ವ್ಯಕ್ತಪಡಿಸಿದಾಗ ನಾವು ಈ ಕೆಲಸವನ್ನು ಮಾಡಬೇಕಾಗುತ್ತದೆ. ನಮಗೆ ಬೇಕಾದವರು ಇದ್ದಾರೆ, ನಾವೇ ಫೀಯನ್ನು ಕೊಡುತ್ತೇವೆ ಎಂದು ಬಂದಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ, ನಿಮ್ಮ ಕಾಲದಲ್ಲಿಯೂ ಇದನ್ನೂ ಮಾಡಿರಬಹುದು ಎಂದು ಕಾಣುತ್ತದೆ. ನಮಗೆ ಗೊತ್ತಿಲ್ಲ. ಇದನ್ನು ಎಲ್ಲರ ಕಾಲದಲ್ಲಿ ನಾವು ಮಾಡುತ್ತಾ ಬಂದಿದ್ದೇವೆ. ಆದರೆ ನಾನು ಮಾತ್ರ ಇದನ್ನು ಮಾಡುವಾಗ ಬಹಳ ನಿಗಾ ವಹಿಸುತ್ತೇನೆ. I refuse to do that. ಆದರೆ ಇದರಲ್ಲಿ ಮಾಡಿರತಕ್ಕಂಥಾದ್ದು

ನಿಜ. ಮೊದಲು ಒಬ್ಬ ಪ್ರಾಸಿಕ್ಯೂಟರ್‌ನ್ನು ಮಾಡಬೇಕೆಂದು ಹೇಳಿ ಅವರು ಒಪ್ಪದಿದ್ದಾಗ, ಎರಡನೆಯವರು ಒಪ್ಪದಿದ್ದಾಗ ಮೂರನೆಯವರನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅವರನ್ನು ಮಾಡಿದ್ದೇವೆ. ಇದರಲ್ಲಿ ನಾವು ವಿಚಾರ ಮಾಡದೇ ಮಾಡಿಲ್ಲ. ಇದಕ್ಕೂ ನಮಗೂ ಏನೂ ಸಂಬಂಧ ಇಲ್ಲ. What is the role of the Prosecutor in this? There is nothing.

ಇಲ್ಲಿ ಇನ್ನೊಂದು ಏನು ಹೇಳುತ್ತಾರೆಂದರೆ ನೀವು ಯಾರನ್ನು ಈ ಸ್ಪೆಷಲ್ ಕೌನ್ಸಿಲ್ ಆಗಿಮಾಡಿದ್ದೀರಿ? ಸ್ಪೆಷಲ್ ಕೌನ್ಸಿಲ್ ಆಗಿ ಮಾಡಿರತಕ್ಕಂಥವರು ಎರಡನೆ ಪ್ರಕರಣದಲ್ಲಿ ರಾಮಚಂದ್ರಗೌಡ ಎಂದು ಯಾರಿದ್ದಾರೆ ಅವರಿಗೆ ಅವರು ವಕೀಲರಾಗಿದ್ದಾರೆ. ಆದರೆ ಇಲ್ಲಿ ಇವರು ಮಾಡುತ್ತಿರತಕ್ಕಂಥಾದ್ದು ಯಾರು ವೆಂಕಟೇಶ್‌ನನ್ನು ಕೊಲೆ ಮಾಡಿದ್ದರೆ ಅವರನ್ನೂ ಶಿಕ್ಷೆ ಮಾಡಬೇಕು. ನಮ್ಮ ಸರ್ಕಾರಿ ವಕೀಲರು ಸರಿಯಾಗಿ ಮಾಡುವುದಿಲ್ಲ ಎಂದು ಹೇಳಿ ಒಬ್ಬ ಪ್ರೈವೇಟ್ ವಕೀಲರನ್ನು ನೇಮಕ ಮಾಡಲಾಯಿತು ಆಗ ರಾಮಚಂದ್ರೇಗೌಡರು ಎಂದು ಹೇಳತಕ್ಕಂಥಾದ್ದು ಇನ್ನೊಂದೂ ಕೊಲೆ ಪ್ರಕರಣ. ಹಾಗಾದರೆ ಈ ಕೊಲೆ ಪ್ರಕರಣದಲ್ಲೆ ರಾಮಚಂದ್ರಗೌಡರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ಈ ವೆಂಕಟೇಶ್‌ಗೆ ಹೊಡೆದಿದ್ದಾರೆಲ್ಲಾ, ಹೊಡೆದವರ ಪೈಕಿಯೇ ಇವರ ರಿಲೇಟೀವ್ಸ್. ಈಗ ಏನು ಅತ್ಯಾಚಾರ ನಡೆಯಿತಲ್ಲಾ,ಈ ಸೋಮಣ್ಣ 70 ವರ್ಷದ ಮುದುಕ, ಆ ಗುಂಪು ಬಡಿದಾಡಿದ್ದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, I will come to that. ರಾಮಚಂದ್ರಗೌಡರು ಯಾರಿದ್ದಾರೆ ಅವರು ಎರಡನೇ ಪ್ರಕರಣದಲ್ಲಿ ಒಬ್ಬ ಅಪರಾಧಿ. ಆ ಎರಡನೇ ಪ್ರಕರಣದಲ್ಲಿ ಅಪರಾಧಿ ಆಗಿರತಕ್ಕಂಥವರು ಯಾರಿದ್ದಾರೆ ಬಹುಶಃ ಅವರು ಅವರಿಗೆರಿ ಲೇಟಿವ್. ಹಾಗಾದರೆ ಈ ವೆಂಕಟೇಶ್ ಪ್ರಕರಣದಲ್ಲಿ ಕೂಡ ಈ ರಾಮಚಂದ್ರಗೌಡ ಎಂದು ಹೇಳುತ್ತಿರುವವರ ಮಾವ. ಹಾಗಾದರೆ ಆ ವಕೀಲ ಆ ಕೇಸ್‌ನಲ್ಲಿ ಎರಡನೇ ಪ್ರಕರಣದಲ್ಲಿ ಅವರನ್ನು ಬಿಡುಗಡೆ ಮಾಡಬೇಕಾದರೆ ಈ ಪ್ರಕರಣದಲ್ಲಿ ಅವನು ಹೋಗಲೆಬೇಕಲ್ಲಾ. ಈ ಪ್ರಕರಣಕ್ಕೆ ಅವನ ವಿರುದ್ಧವಾಗಿಯೇ ಅವನು ಮಾಡಬೇಕು. ಬಚ್ಚೇಗೌಡರು ಯಾರನ್ನು ಮಾಡಬೇಕೆಂದು ಹೇಳಿದರು. ಆ ಪ್ರಕರಣದಲ್ಲಿ. ಅವರ ವಿರುದ್ಧ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೇಗೆ ಮಾಡುತ್ತಾರೆ ಅವರನ್ನು? ನೈತಿಕ ದೃಷ್ಟಿಯಿಂದ ಇದು ಸಾಧ್ಯವೇ? How can it be possible?

Sri M. C. Nanaiah : This has been brought to my notice. Let me tell you between the first case and the second case, and the appointement of the prosecutor, it has got nothing to do with that. This is a matter which should be looked into. You have brought it to my notice. The Special Counsel whom I have appointed in respect of this particular case-he is an Advocate, for that particular man in the second case. Mr.Ramachandra Gowda happens to be the uncle of Venkatesh.

ಆದುದರಿಂದ ನಾನು ಇದರ ಬಗ್ಗೆ ಖಂಡಿತ ವಿಚಾರ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಏನು ವಿಚಾರ ಮಾಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನು ವಿಚಾರ ಮಾಡುತ್ತೀರಿ ನಾವು ಒಂದು ಡಿಮಮ್ಯಾಂಡ್ ಇಟ್ಟಿದ್ದೇವೆ.

Sri M. C. Nanaiah : You are asking me to make an announcement that I am going to withdraw it..

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನೀವು ಆಡಳಿತದಲ್ಲಿ ಇದ್ದಾಗ on the floor of the house ಹೇಳುತ್ತಿದ್ದೀರಾ?

Sri M. Mallkarjuna Kharge : When you know the facts.

Sri M. C. Nanaiah : I came to know the facts just now when you revealet it. Let me call for all the files. Let me take the decision. Whatever decision I have to take, I will take it in accordance with the Rules. I will take it impartially. Let there be no impression in the minds of my friends that we are doing something as far as my department is concerned.

ಶ್ರೀ ವೈ. ರಾಮಕೃಷ್ಣ : ಸದಸ್ಯರಿಗೆ ಮಾತ್ರವಲ್ಲ, ಇಡೀ ದೇಶಕ್ಕೆ ಗೊತ್ತಾಗಬೇಕು. ಇಂಪಾರ್ಷಿಯಲ್ ಆಗಿ ಮಾಡಿದ್ದಾರೆ, ಪಾರದರ್ಶಕವಾಗಿ ಮಾಡಿದ್ದಾರೆ ಎಂದು ಗೊತ್ತಾಗುವ ಹಾಗೆ ಮಾಡಿ.

ಶ್ರೀ ಎಂ. ಸಿ. ನಾಣಯ್ಯ : ನಾವು ಮಾಡುತ್ತಿರತಕ್ಕಂಥದ್ದು ದೇಶಕ್ಕೆ ಗೊತ್ತಾಗಬೇಕು. ಇದರಲ್ಲಿ ಮುಚ್ಚಿಡುವುದಕ್ಕೆ ಏನಿದೆ? ನಾವು ಸ್ಪೆಷಲ್ ಕೌನ್ಸಿಲ್ ಮಾಡುವುದು ಯಾರ ಮೇಲೆ? ಯಾರು ಕಂಪ್ಲಸೆಂಟ್ ಇದ್ದಾರೆ ಅವರ ಪರವಾಗಿ ಮಾಡುತ್ತೇವೆ. ಅಕ್ಯೂಸ್ಡ್ ಪರವಾಗಿ ಮಾಡುತ್ತೇವೆಯೇ? ಅವನ್ನು ಎಲ್ಲಾದರೂ ವಿರೋಧ ಮಾಡುವುದಕ್ಕೆ ಹೋದರೆ ಯಾರಿಗೆ ಇದರಿಂದ ಅನಾಹುತವಾಗುತ್ತದೆ? ಅವನು ವಿರೊಧ ಮಾಡುವುದಕ್ಕೆ ಹೋದರೆ ವೆಂಕಟೇಶ್‌ನನ್ನು ಯಾರು ಕೊಲೆಮಾಡಿದರು, ಕೊಲೆ ಮಾಡಿದವನಿಗೆ ಪರವಾಗುತ್ತದೆ. ಆ ಕೆಲಸವನ್ನು ಶ್ರೀಮಾನ್ ಬಚ್ಚೇಗೌಡರು ಮಾಡುತ್ತಾರಾ? ಇದನ್ನು ತಾವು ಗಮನದಲ್ಲಿ ಇಟ್ಟು ಕೊಳ್ಳಬೇಕೆಂದು ಹೇಳಿದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಸೀಮಿತವಾಗಿ ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಕಾನೂನು ಮಂತ್ರಿಗಳು ಹೇಳಿದ್ದಾರೆ, ಈಗ ಅವರ ಪರವಾಗಿ ಕೇಸ್ ನಡೆಸತಕ್ಕಂಥವರು, ಅವರ ವಿರುದ್ಧವಾಗಿ ಕೇಸ್ ನಡೆಸುತ್ತಾರೆ, ಅವರ ವಿರುದ್ಧವಾಗಿ ಹೋಗುತ್ತಾರೆ ಎಂದರೆ ಹೇಗೆ ನಂಬುದಕ್ಕಾಗುತ್ತದೆ.

ಶ್ರೀ ವೈ.ರಾಮಕೃಷ್ಣ : ಹಾಗಾದರೆ ಹೊಡೆದು ಹಾಕಿ ಬಿಡಿ.

ಶ್ರೀ ಸಿ. ಭೈರೇಗೌಡ : ಯಾರು ಹೇಳುತ್ತಾರೆ ಆ ಮಾತನ್ನು ಹೊಡೆದು ಹಾಕಿಬಿಡಿ ಎಂಬ ಮಾತನ್ನು ಯಾರೂ ಹೇಳುತ್ತಿಲ್ಲ.. ನೀವು ಇಲ್ಲಿ ಮಾತನಾಡಿ ಇನ್ನು ಆ ಕೆಲಸ ಮಾಡುತ್ತಿದ್ದೀರಿ.

ಶ್ರೀ ವೈ. ರಾಮಕೃಷ್ಣ : ಪಾಪಿ ಪರದೇಶಿಗಳನ್ನು ಹೆಣ್ಣುಮಕ್ಕಳನ್ನು ನಾಶ ಮಾಡಿ. There must be a limit to this.

ಇವೊತ್ತಿನದಿವಸ ಹರಿಜನರು-ಗಿರಿಜನರು ಯಾರಿಗೂ ರಕ್ಷಣೆ ಸಿಗುತ್ತಿಲ್ಲ. ಎಲ್ಲಿ ನೋಡಿದರೂ ಖೂನಿಗಳು ಏನು ದಬ್ಬಾಳಿಕೆಯೇ? ಇದು ಸರ್ಕಾರದ ದಬ್ಬಾಳಿಕೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ : ಏನೂ ಇಲ್ಲ ಇದು ಎಲ್ಲಾ ಕಾಲದಲ್ಲೂ..

( ಗೊಂದಲ)

ಶ್ರೀ ಸಿ. ಭೈರೇಗೌಡ : ಎಲ್ಲಾ ಕಡೆಯಲ್ಲೂ ನಡೆದಿದೆ, ಹಿಂದೆ ಎಲ್ಲಾ ನಡೆದಿದೆ. ನಮ್ಮ ಜಿಲ್ಲೆಯಲ್ಲಿ ಏನು ನಡೆದಿದೆ ಎಂಬುದನ್ನು ಹೇಳಬೇಕಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೇಳಿ ಏನು ಬೇಡ ಎನ್ನುತ್ತಾರಾ? ಯಾರಿಗೆ ಯಾರು ಸಂಬಂಧ, ಹೇಳಿ.

ಶ್ರೀ ವೈ. ರಾಮಕೃಷ್ಣ : ನಮಗೇನು ನೆಂಟರು ಆಗಬೇಕೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅರೆ ನಾವು ಕೇಳುತ್ತಿದ್ದೇವೆ ಹೇಳಿ. ನಾವೇನು ಬಾಯಿ ಮುಚ್ಚಿದ್ದೇವೆಯೋ?

ಶ್ರೀ ಸಿ. ಭೈರೇಗೌಡ : ದಯವಿಟ್ಟು ಕೇಳಿ, ಸಬಂಧಿಕರಾಗಿ ಅಣ್ಣತಮ್ಮಂದಿರಾಗಿರತಕ್ಕವರೇ ಅನೇಕ ಕಡೆ ಕೊಲೆ ಮಾಡಿಕೊಂಡಿದ್ದಾರೆ, ಸಂಬಂಧಕ್ಕೂ ಇದಕ್ಕೂ ಅರ್ಥವನ್ನು ಕಲ್ಪಿಸುವುದಕ್ಕೆ ಹೋಗಬೇಡಿ. ಅದನ್ನು ಕೇಳುವುದಕ್ಕೆ ಹೋಗಬೇಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವಂತೂ ಇನ್ವಾಲ್ವ್ ಇಲ್ಲ ಎಂದು ಹೇಳಿಕೊಳ್ಳುತ್ತಿದ್ದೀರಿ, ಅದಕ್ಕಾಗಿ ಸಿ.ಬಿ.ಐ.ಗೆ ಒಪ್ಪಿಸುವುದಕ್ಕೇನು ಸ್ವಾಮಿ?

ಶ್ರೀ ಸಿ. ಭೈರೇಗೌಡ : ಏತಕ್ಕೆ ಯಾರು ಕಾರಣಕರ್ತರು ಆಗಿದ್ದಾರೆ ಎಂಬುದಕ್ಕೆ ಏನಾದರೂ ಎವಿಡೆನ್ಸ್ ಇದ್ದರೆ ಹೇಳಿ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ ಇವೊತ್ತು ಇಡೀ ರಾಜ್ಯದ ಜನರ ಮನಸ್ಸಿನಲ್ಲಿ ಸಂಶಯ ಮೂಡಿದೆ, ಏಕೆಂದರೆ, ಒಂದು ಕಡೆ ಪಬ್ಲಿಕ್ ಪ್ರಾಸಿಕ್ಯೂಟರನ್ನು ಇನ್‌ಫ್ಲೂಯೆನ್ಸ್ ಮಾಡಿ ಅಪಾಯಿಂಟ್ ಮಾಡಿಕೊಳ್ಳುತ್ತಿದ್ದಾರೆ, ಇನ್ನೊಂದು ಕಡೆ ಸ್ಪಷಲ್ ಪ್ರಾಸಿಕ್ಯೂಟರ್..

ಶ್ರೀ ಸಿ. ಭೈರೈಗೋಡ : ಪಬ್ಲಿಕ್ ಪ್ರಾಸಿಕ್ಯೂಟರ್ ಕೆಲಸ ಏನು ಸ್ವಾಮಿ, ಕೋರ್ಟಿನಲ್ಲಿ ಕೆಲಸ ಇರುತ್ತದೆ, ಅದು ಬಿಟ್ಟು ಕೇಸ್‌ನಲ್ಲಿ ಏನು ಮಾಡುತ್ತಾರೆ? ನ್ಯಾಯಾಲಯದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಕೆಲಸ ಇರತಕ್ಕಂಥದ್ದು..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವೇ ಹೇಳಿದಿರಿ ಪತ್ರ ಬರೆದಿದ್ದೇವೆ ಎಂದು, ಅಂದರೆ ಇನ್‌ಫ್ಲೂಯನ್ಸ್ ಎಂದರೆ ಏನು?

ಶ್ರೀ ಎಂ. ಸಿ. ನಾಣಯ್ಯ : ಏನು ಇಫ್ಲೂಯೆನ್ ಆಗುತ್ತದೆ? ಯಾರು ಬೇಕಾದರೂ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅರೆ ನೀವೇ ಎರಡೂ ಹೇಳುತ್ತೀರಿ, ನನ್ನ ಹತ್ತಿರ ಬಂದು ಹೀಗೆ ಮಾಡು ಎಂದರು ಅದು ಏನು ತಪ್ಪಾಗುತ್ತದೆ ಎಂದು.

ಶ್ರೀ ಎಂ. ಸಿ. ನಾಣಯ್ಯ : ನಿಮ್ಮ ಕಾಲದಲ್ಲಿ ನೀವು ಮಾಡಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗೇನು ಹೇಳಿದಿರಿ, ಯಾವ ಇನ್‌ಫ್ಲೂಯೆನ್ಸ್ ಇಲ್ಲ ಎಂದು ಒಂದು ಕಡೆ ಹೇಳಿದಿರಿ, ಒಂದು ಕಡೆ ಇನ್ನೊಂದು ಹೇಳುತ್ತೀರಿ, ಇದು ಏಕೆ? ನೀವು ಇದನ್ನು ಸಿ.ಬಿ.ಐ.ಗೆ ವಹಿಸಿ.

ಶ್ರೀ ಎಂ. ಸಿ. ನಾಣಯ್ಯ : ಸಿ.ಬಿ.ಐ.ಗೆ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ ? ನಾವು ಹೇಳುತ್ತಿದ್ದೇವೆ, ನಿರ್ದಿಷ್ಟವಾಗಿ ಇದಕ್ಕೆ ಸರ್ಕಾರದ ಪ್ರೋತ್ಸಾಹ ಇದೆ ಎನ್ನತಕ್ಕಂಥದ್ದು ಬಂದ ಮೇಲೆ, ಆ ಸಂಶಯವನ್ನು ನಿವಾರಣೆ ಮಾಡವುದಕ್ಕೆ ಸಿ.ಬಿ.ಐಗೆ ಕೊಟ್ಟುಬಿಡಿ

ಶ್ರೀ ಎಂ. ಸಿ. ನಾಣಯ್ಯ : ಇದು ಸಿ.ಬಿ.ಐ.ಗೆ ಕೊಡಲಿಕ್ಕೆ ಇರತಕ್ಕಂಥ ಕೇಸ್ ಅಲ್ಲ, ಸಿ.ಓ.ಡಿ.ಗೆ ನಾವು ಕೊಟ್ಟಿದ್ದೇವೆ, ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತೇವೆ ಎಂದು ಹೇಳಿದ್ದಾರೆ, ಮಂತ್ರಿಗಳ ಹಸ್ತಕ್ಷೇಪ ಇಲ್ಲ ಎಂದು ಹೇಳುತ್ತೇವೆ, ಅವರು ದಯವಿಟ್ಟು ನನ್ನ ಮೇಲೆ ವಿಶ್ವಾಸ ಇಡಲಿ, ಕೇಸ್ ಏನಾಗುತ್ತದೆ ಎಂದು ನೋಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ವಿಶ್ವಾಸದ ಪ್ರಶ್ನೆ ಅಲ್ಲ, ಬೇರೆ ಕೇಸ್ ಇದ್ದಿದ್ದರೆ ವಿಶ್ವಾಸದ ಪ್ರಶ್ನೆ ಬರುತ್ತಿತ್ತು, ಇಲ್ಲಿ ಏನಾಗಿದೆ ಎಂದರೆ ಅನ್‌ಫಾರ್ಚುನೇಟ್‌ಲಿ, ಅವನು ತಾಲ್ಲೂಕು ಪಂಚಾಯಿತ್ ಸದಸ್ಯನಿದ್ದಾನೆ, ಮತ್ತೆ ಆತ ಬಚ್ಚೇಗೌಡರ ಸಂಬಂಧಿ ಎಂದು ಹೇಳಿ ಈಗಾಗಲೇ ತಾವೂ ಕೂಡ ಹೇಳಿದಿರಿ, ಎಲ್ಲರಿಗೂ ಗೊತ್ತಿದೆ.. ಇರಬಹುದು ಆದರೆ ಎರಡೂ ಕಡೆಯೂ ಬರೆದಿದ್ದಾರೇನು, ಅತ್ಯಾಚಾರ ಮಾಡಿದ ಮೇಲೆ ಪತ್ರ ಬರೆದಿದ್ದರೋ ನಿಮಗೆ ಹೇಳಿದಿರಾ ಇನ್ನೊಂದು ಸ್ಪೆಷಲ್ ಪ್ರಾಸಿಕ್ಯೂಟರ್ ಇವರಿಗೂ ನಾಮಿನೇಟ್ ಮಾಡಿ ಎಂದು..

ಶ್ರೀ ಸಿ. ಭೈರೇಗೌಡ : ನೀವೂ ಬರೆಯಿರಿ, ಬೇಕಾದರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ ನೀವು ಮಧ್ಯೆ ಮಧ್ಯೆ ತಡೆಯುವುದಕ್ಕೆ ಬರುತ್ತಿದ್ದೀರಿ. ಅರೆ ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡನಂತೆ ನೀವ್ಯಾಕೆ? ಪದೇ ಪದೇ ಏಕೆ ಮಧ್ಯೆ ಪ್ರವೇಶಿಸುತ್ತೀರಿ? ನಾನು ಹೇಳುತ್ತಿರುವಂಥದ್ದು ಆತ ತಾಲ್ಲೂಕು ಪಂಚಾಯಿತಿಯ ಸದಸ್ಯ, I am telling because he is a Taluk Panchayat member belonging to your party and he is also related to a Minister and that Minister also has taken interest to write a letter to appoint a Special Prosecutor.

ಒಂದರ ಮೇಲೊಂದು ಈ ಘಟನೆಗಳನ್ನು ನಾವು ನೋಡಿದಾಗ, ಇದರಿಂದ ಬರೀ ಸಿ.ಓ.ಡಿ. ಮೇಲೆ ಪರಿಣಾಮ ಬೀರಿತಕ್ಕಂಥದ್ದು ಸಾಧ್ಯತೆ ಇದೆ. ಅದಕ್ಕಾಗಿ ನಾವು ಹೇಳಿದ್ದುದು ಇದು ನಿಷ್ಪಕ್ಷಪಾತ ತನಿಖೆಯಾಗಬೇಕೆಂದರೆ ಸಿ.ಬಿ.ಐ.ಗೆ ತಾವು ರೆಫರ್ ಮಾಡಿ, ಅಲ್ಲಿ ಎಲ್ಲಾ ಸತ್ಯಾಂಶಗಳು ಹೊರಬರಲಿ, ಯಾರೇ ಇರಲಿ, ಈ ಕಡೆಯವರು, ಆ ಕಡೆಯವರು ಎಲ್ಲರೂ ಬರುತ್ತಾರೆ, ಅದಕ್ಕಾಗಿ ನೀವ್ಯಾಕೆ ಹಿಂಜರಿಯುತ್ತೀರಿ ಸ್ವಾಮಿ? ಅದರೊಳಗೆ ಪ್ರತಿಷ್ಠೆ ಪ್ರಶ್ನೆ ಏನಿದೆ?

ಶ್ರೀ ಎಂ. ಸಿ. ನಾಣಯ್ಯ : ನಾವು ಮಾಡುತ್ತಾ ಇರತಕ್ಕಂಥ ತನಿಖೆ ಯಾರುದು ಇದೆ, ಸಿ.ಓ.ಡಿಯಲ್ಲಿ ಇರತಕ್ಕ ನಮ್ಮ ಅಧಿಕಾರಿಗಳು ಯಾರಿದ್ದಾರೆ ಅವರು ಬಹಳ ಎತ್ತರದ ಮಟ್ಟದಿಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಿದ್ದಾರೆ. ಎಂದು ಹೇಳುತ್ತಾ ಇರತಕ್ಕಂಥದ್ದೇ ನಮ್ಮ ಒಂದು ಚಿಂತನೆ, ಆ ಕೆಲಸವನ್ನು ಅವರು ಮಾಡುತ್ತಾರೆ. ಅದಲ್ಲಿ ನಿಮಗೆ ಏಕೆ ಸಂಶಯ ? ಸಿ.ಓ.ಡಿ.ಯಲ್ಲಿ ನಿಮಗೆ ಏಕೆ ಸಂಶಯ ? ಅದು ಒಂದಾಯಿತು, ಇನ್ನೊಂದು ಪ್ರಕರಣ ಇದೆ, ಎರಡನೇ ಪ್ರಕರಣದಲ್ಲಿ ಯಾರು ಕೊಲೆ ಮತ್ತು ಅತ್ಯಾಚಾರಕ್ಕೆ ಒಳಪಟ್ಟವರಿದ್ದಾರೆ, ಅವರ ಸಂಬಂಧಿಕರು ಯಾರಿದ್ದಾರೆ, ಅವರ್ಯಾರಾದರೂ ಯಾವ ವಕೀಲರನ್ನು ನೀವು ಸ್ಪೆಷಲ್ ಕೌನ್ಸಿಲ್ ಆಗಿ ಮಾಡಬೇಕೆಂದು ಕೇಳಿದರೆ ಯಾರನ್ನು ಬೇಕಾದರೂ ಮಾಡಿಕೊಂಡು ಬರಲಿ. I am prepared to appoint. Let there be an application from that side.

ಯಾರನ್ನು ಮಾಡಬೇಕೆಂದು ಕೇಳಿಸಾರ್, I am prepared to do that straight-away tomorrow. Let me give that assurance to this house.

ಶ್ರೀ ಸಿ. ಭೈರೇಗೌಡ : ಖರ್ಗೆಯವರೇ ಕೊಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಏಕೆ ಕೊಡಲಿ, ನೀವು ಹೇಳಿದಿರಲ್ಲಾ ಅವರ ಸಂಬಂಧಿಗಳು ಯಾರಿದ್ದಾರೆ. ಅವರು ಕೊಡಬೇಕು, ಏಕೆ ಕೊಟ್ಟಿಲ್ಲ.

**ಶ್ರೀ ಸಿ. ಭೈರೇಗೌಡ : ತಾವೇ ಕೊಡಿ.**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಕೊಡುವುದಕ್ಕಿಂತಲೂ, ನಿಮ್ಮ ಬೀಗರ ನೆಂಟರು ಎಂದು ನೀವೇ ಹೇಳಿಕೊಂಡಿರಲ್ಲಾ ಎರಡೂ ಕಡೆ, ಕೊಡಿ. ಅದಕ್ಕೆ ಹೇಳುವುದು if you are impartial, then refer it to

ಶ್ರೀ ಎಂ.ಸಿ. ನಾಣಯ್ಯ : ನಿಮ್ಮ ಬಾಯಲ್ಲಿ ಸಿ.ಬಿ.ಐ ಇದೆ ನಮಗೆ ಸಿ.ಬಿ.ಐ ನಿಮಗೆ ಸಿ.ಬಿ.ಐ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾದ ಹಠಮಾಡಿ ಧೋರಣೆ ಇವರದ್ದು ಇದೆ. ಇವರು ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡುವುದಿಲ್ಲ ಎಂದು ಹೇಳುತ್ತಾರೆ, ಅಮೇಲೆ ಪ್ರಾಸಿಕ್ಯೂಟರನ್ನು ಛೇಂಜ್ ಮಾಡುವುದಕ್ಕೂ ಕೂಡ, ವಿತ್‌ಡ್ರಾ ಮಾಡಿ ಅನೌನ್ಸ್ ಮಾಡಿ ಎಂದರೆ ಅದಕ್ಕೂ ಕೂಡ ಒಪ್ಪುತ್ತಿಲ್ಲ. ಅದಕ್ಕಾಗಿ ಈ ಮಾತನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಹೌದು ಏನು ಮಾಡಬೇಕು, ನೀವು ಒಪ್ಪಿಕೊಳ್ಳುತ್ತೀರಿ ಇನ್ನೊಂದು ಕಡೆ ಏನೆದಂರೆ ವಿತ್‌ಡ್ರಾ ಮಾಡುವುದಕ್ಕೂ ತಯಾರಿಲ್ಲ, ಸಿ.ಬಿ.ಐ.ಗೆ ರೆಫರ್ ಮಾಡುವುದಕ್ಕೂ ತಯಾರಿಲ್ಲ. and he is also related to both sides ಎಂದು ನೀವೇ ಹೇಳುತ್ತೀರಿ.

( ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರನ್ನೊಳಗೊಂಡಂತೆ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ಬಿ.ಜೆ.ಪಿ.ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವಂತದ್ದು ದಾಖಲೆಗೆ ಹೋಗಬಾರದು,

ಅಧ್ಯಕ್ಷರು : ದಯಮಾಡಿ ಕೇಳಿ, ಅವರ ಸ್ಥಾನದಲ್ಲಿ ಕುಳಿತು ಅವರು ಏನಾದರೂ ಹೇಳಿದ್ದರೆ, ಅದನ್ನು ಕಡತ ತರಿಸಿ ನೋಡುತ್ತೇನೆ. ಕೆಲವು ಸ್ಟ್ಯಾಂಡಿಗ್ ಇನ್‌ಸ್ಟ್ರಕ್ಷನ್‌ಗಳಿವೆ, ಯಾವಾಲೂ, ಯಾವುದೇ ಸನ್ನಿವೇಶದಲ್ಲೂ ಕೂಡ ತಮ್ಮ ಸೀಟನ್ನು ಬಿಟ್ಟು ಬೇರೆ ಜಾಗದಿಂದ

ಯಾರು ಏನೇ ಮಾತನಾಡಿದರೂ ಅದು ಕಡತಕ್ಕೆ ಹೋಗುವುದಿಲ್ಲ, ಪತ್ರಿಕೆಯವರೂ ಕೂಡ ಅದನ್ನು ಗಮನಿಸಬೇಕಾದ ಅಗತ್ಯ ಇಲ್ಲ. ಅವರು ತಮ್ಮ ಸ್ಥಾನದಲ್ಲಿ ಕುಳಿತು ಹೇಳಿರುವುದರಲ್ಲಿ ಏನಾದರೂ ಅಬ್ಜೆಕ್ಷನ್ಸ್ ಬಂದರೆ ನಾನು ಕಡತವನ್ನು ತರಿಸಿ ನೋಡುತ್ತೇನೆ.

ಹಕ್ಕುಚ್ಯುತಿ ಪ್ರಸ್ತಾವ

3) ಬೆಂಗಳೂರು ದೂರದರ್ಶನದಲ್ಲಿ ಸದನದ ಕಾರ್ಯಕಲಾಪಗಳ ಬಗ್ಗೆ ಸರಿಯಾಗಿ ಪ್ರಸಾರ ಮಾಡದೇ ಇರುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ 18ನೇ ತಾರೀಖಿನಂದು ಆಯವ್ಯಯ ಮಂಡನೆಯಾಯಿತು. ದೂರದರ್ಶನದವರ ನೇರಪ್ರಸಾರ ಎಂದು ಹೇಳಿ ನಮಗೆ ಬಹಳ ಸಂತೋಷವಾಯಿತು. ಏತಕ್ಕೆಂದರೆ ಈ ಸದನದಲ್ಲಿ ಪ್ರಪ್ರಥಮವಾಗಿ ದೂರದರ್ಶನದವರು ನೇರ ಪ್ರಸಾರವನ್ನು ಮಾಡತಕ್ಕಂಥದ್ದು ಇದು ಒಳ್ಳೆಯ ಸಂಪ್ರಾದಾಯ ಮತ್ತು ಒಳ್ಳೆಯ ಅಧ್ಯಾಯವನ್ನು ತಾವು ಆರಂಭಮಾಡಿದಿರಿ. ಮತ್ತೆ ದೂರದರ್ಶನವಲ್ಲದೆ ಖಾಸಗೀ ದೂರದರ್ಶನದವರಿಗೂ ಇಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ, ತಮ್ಮ ಆ ಒಂದು ಔದಾರ್ಯ ನಾವು ಅತ್ಯಂತ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಆದರೆ ನಾನು ನೇರವಾಗಿ ಬೆಂಗಳೂರು ದೂರದರ್ಶನ ಆ ನೇರ ಪ್ರಸಾರವನ್ನು ಮಾಡುವಾಗ, ಅವರು ಈ ಸಭೆ ಎಂದರೆ ಏನು ಎನ್ನುವಂಥಾದ್ದನ್ನು ಮರೆತರು. ಈ ಸಭೆಯಲ್ಲಿ ಕೇವಲ ಆಡಳಿತ ಪಕ್ಷದವರ ಪರವಾಗಿ ಆಯವ್ಯಯವನ್ನು ಮಂಡಿಸುತ್ತಿದ್ದಾರೇನೋ ಎನ್ನುವಂಥ ಭಾಸ ಅವರಿಗೆ ಆಗಿರಬಹುದು. ಈ ಸದನದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧಪಕ್ಷದವರು ಇದ್ದರೆ. ಈ ಮಧ್ಯೆ ಆಯವ್ಯಯ ಮಂಡನೆಯಾಗುತ್ತಿದೆನ್ನುವಂಥಾದ್ದು ಮತ್ತು ಇದು ಅತ್ಯಂತ ಪ್ರಾಮುಖ್ಯವಾದಂತಹ ಸಂದರ್ಭವಾಗಿದೆ. ಈ ಸಂದರ್ಭದಲ್ಲಿ ನಡೆದಂಥ ಪ್ರಸಂಗವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಆಯವ್ಯಯ ಮಂಡನೆಯಾದಾಗ ಒಂದು ಕಡೆ ಕಾಂಗ್ರೆಸ್ ಪಕ್ಷದವರು ನಿರಂತರವಾಗಿ ವಿರೋಧ ಮಾಡಿ ಸಭಾತ್ಯಾಗ ಮಾಡಿದರು. ಅವರು ಸಭಾತ್ಯಾಗವನ್ನು ಮಾಡುವಾಗ ಬಸ್ ದರ ಏರಿಕೆ, ಮತ್ತು ವಿದ್ಯುಚ್ಛಕ್ತಿಯ ದರವನ್ನು ಏರಿಸಿದ್ದೀರಿ. ಈ ರೀತಿಯಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆರಿಯಾಗಿ ಹೊರಗಡೆ ಹಾಕಿ ಮತ್ತೆ ತಾವು ಆಯವ್ಯಯವನ್ನು ಮಂಡಿಸುತ್ತಿದ್ದೀರಿ, ಈ ನೀತಿ ಸರಿಯಲ್ಲವೆಂದು ಹೇಳಿ ಅವರು ಸಭಾತ್ಯಾಗ ಮಾಡಿದರು. ಈ ಸಭಾತ್ಯಾಗಕ್ಕೆ ಮುಂಚೆ ಪ್ರಪ್ರಥಮವಾಗಿ ಆಯವ್ಯಯ ಮಂಡನೆಯಾದಂತಹ ಸಂದರ್ಭದಲ್ಲಿ ನಾನು ಎದ್ದು ಬಸ್ ದರ ಮತ್ತು ವಿದ್ಯುಚ್ಛಕ್ತಿಯ ದರದ ಬಗ್ಗೆ ಇದೆಲ್ಲಾ ಏರಿಕೆ ಮಾಡಿರುವಂಥದ್ದು ಅವರು